ಮಾನಸಿ

ತಿಂಗಳ ಪತ್ರಿಕೆ

ಡಿಸೆಂಬರ್ : 1997

- ವೇಶ್ಯಾವೃತ್ತಿ ಮತ್ತು ಕಾನೂನು ಸಮ್ಮತಿ
- ಅಪ್ರಾಪ್ತ ವಯಸ್ಸಿನ ಬಾಲಕಿಯರು ಮತ್ತು ವೇಶ್ಯಾವೃತ್ತಿ
- "ಮಾಧವಿ"ಯ ಮೂಕವೇದನೆ
- "ತಾಯ್ತತನ"ದ ಗುಣಗಳನ್ನು ಪುರುಷರು ಬೆಳೆಸಿಕೊಳ್ಳಲು ಸಾಧ್ಯವೆ?
- ಭಾರತದಲ್ಲಿ ಮಹಿಳಾ ಪೋಲೀಸರು

ಮಾನಸ

ತಿಂಗಳ ಪತ್ರಿಕೆ

ಸಂಪುಟ : 12 ಸಂಚಿಕೆ : 10

ಡಿಸೆಂಬರ್ : 1997

ವಿಳಾಸ :

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

"ಮುಗ್ಧರ ಮಾರಾಟ"

"ಮುಗ್ಧರ ಮಾರಾಟ" ರುಚಿರಾ ಗುಪ್ತ ನಿರ್ಮಿಸಿದ ನೇಪಾಳದಲ್ಲಿ ಎಳೆಯ ವಯಸ್ಸಿನ ಹೆಣ್ಣು ಮಕ್ಕಳನ್ನು ಅಮಾನುಷವಾಗಿ ವೇಶ್ಯಾವೃತ್ತಿಗೆ ಮಾರಾಟಮಾಡುತ್ತಿರುವುದನ್ನು ಕುರಿತ ಡಾಕ್ಯುಮೆಂಟರಿ ಚಿತ್ರ. ಖ್ಯಾತ ಈಮ್ಮಿ ಪ್ರಶಸ್ತಿಯನ್ನು ಗಳಿಸಿದ ಈ ಚಿತ್ರ ವೇಶ್ಯಾವೃತ್ತಿಯ ಬಗ್ಗೆ ಮಾನವೀಯತೆಯುಳ್ಳವರೆಲ್ಲ ನಾಚಿಕೆ ಪಟ್ಟುಕೊಳ್ಳಬೇಕಾದಂತಹ ಅಂಶಗಳನ್ನು ಬೆಳಕಿಗೆ ತರುತ್ತದೆ.

ವೇಶ್ಯಾವೃತ್ತಿಯಲ್ಲಿ ನೇಪಾಳದ ಹೆಸರು ಹೊಸದೇನಲ್ಲ. ಅಂಕಿ ಅಂಶದ ಪ್ರಕಾರ ಬಾಂಬೆಯ ಕಾಮಾಟಿಪುರದಲ್ಲಿ ಅಲ್ಲಿರುವ ಒಟ್ಟು ವೇಶ್ಯೆಯರಲ್ಲಿ ಶೇ. 30%ರಷ್ಟು ಮಹಿಳೆಯರು ನೇಪಾಳಿಯರು.

ನೇಪಾಳದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮಾರಾಟ ತೀವ್ರಗತಿಯಲ್ಲಿ ಹೆಚ್ಚುತ್ತಿದೆ. ಹುಡುಗಿ ಚಿಕ್ಕವಳಾದಷ್ಟು ಅವರ ಮಾರಾಟದ ಬೆಲೆ ಹೆಚ್ಚುತ್ತದೆ. ಅಪ್ರಾಪ್ತ ವಯಸ್ಸಿನ ಬಾಲಕಿಯರನ್ನು ಕೇವಲ 3,000 ರೂ.ಗಳಿಗೆ ಮಾರಾಟ ಮಾಡಲಾಗುತ್ತದೆ. ಇನ್ನು ಕೆಲವು ಹಳ್ಳಿಗಳಲ್ಲಿ ಅವರು ಋತುಮತಿಯರಾಗುವ ಮೊದಲೆ ಮಾರಾಟ ಮಾಡಲಾಗುತ್ತದೆ. ಇನ್ನು ಕೆಲವು ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಹುಟ್ಟುವುದನ್ನು ಸಂಭ್ರಮ ಸಂತೋಷಗಳಿಂದ ಸ್ವಾಗತಿಸಲಾಗುತ್ತದೆ.

ವೇಶ್ಯಾವೃತ್ತಿಯಲ್ಲಿ ತೊಡಗಿಸುವ ಉದ್ದೇಶದಿಂದ ಬಾಲಕಿಯರಿಗೆ ತರಬೇತಿ ನೀಡಲು ಕೆಲವು ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮಾರಾಟ ಮಾಡಲಾದ ಬಾಲಕಿಯರಿಗೆ ಅಲಂಕಾರ ಮಾಡಿಕೊಳ್ಳುವುದು, ಗಂಡಸರನ್ನು ಒಲೈಸುವುದು ಮುಂತಾದವುಗಳನ್ನು ಇಂತಹ ಕೇಂದ್ರಗಳಲ್ಲಿ ಕಲಿಸಿ ಕೊಡಲಾಗುತ್ತದೆ. ಬಾಲಕಿಯರು ಪ್ರತಿಭಟಿಸುವ ಧೈರ್ಯ ಮಾಡಿದರೆ, ಅವರಿಗೆ ಊಟ ತಿಂಡಿಯನ್ನು ಕೊಡದೆ ಅಮಾನುಷವಾಗಿ ಹೊಡೆಯುವುದು, ಸಿಗರೇಟು ತುಂಡುಗಳಿಂದ ಸುಡುವುದು, ಅತ್ಯಾಚಾರವೆಸಗುವುದು, ಏಳು ವರ್ಷದ ಬಾಲಕಿಯನ್ನು ನಾಲ್ಕು ಜನ ಅತ್ಯಾಚಾರವೆಸಗಿದ ನಿದರ್ಶನವೂ ಇಲ್ಲಿದೆ. ಹೀಗೆ ಹಲವು ರೀತಿಯಲ್ಲಿ ಹಿಂಸಿಸುವುದು ತೀರಾ ಸಾಮಾನ್ಯ. ವೇಶ್ಯಾವೃತ್ತಿಯನ್ನು ವ್ಯವಸ್ಥಿತವಾಗಿ ಸಾಂಸ್ಥಿಕಗೊಳಿಸುವ ಪ್ರಯತ್ನಕ್ಕೆ ಇದು ಸ್ಪಷ್ಟವಾದ ನಿದರ್ಶನ.

ತಂದೆ ತಾಯಿಯರು ಬಾಲಕಿಯರನ್ನು 3 ಸಾವಿರ ರೂ.ಗಳಿಂದ 6 ಸಾವಿರ ರೂ.ಗಳಿಗೆ ಮಾರಾಟ ಮಾಡುತ್ತಾರೆ. ವೇಶ್ಯಾವಾಟಿಕೆಗಳಿಗೆ ಅವರನ್ನು 50 ಸಾವಿರ ರೂ.ಗಳಿಗೆ ಮಾರಾಟ ಮಾಡಲಾಗುತ್ತದೆ. ಸುಮಾರು ಐದು ವರ್ಷಗಳವರೆಗೆ ನೇರವಾಗಿ ಹಣವನ್ನು ಕೊಡುವುದಿಲ್ಲ. ಅವಳು ದುಡಿಯುವ ಹಣವನ್ನು ಯಜಮಾನಿ ಪಡೆಯುತ್ತಾಳೆ. ಐದು ವರ್ಷಗಳ ನಂತರ ಅಲ್ಪ ಸ್ವಲ್ಪ ಹಣವನ್ನು ಪಡೆದರೂ ಅದು ಅವಳ ಅಲಂಕಾರ ಸಾಮಗ್ರಿಗಳಿಗೆ ಖರ್ಚಾಗುತ್ತದೆ.

ವೇಶ್ಯೆಯರು ಸಾಮಾನ್ಯವಾಗಿ 10ರಿಂದ 60ರೂ.ಗಳವರೆಗೆ ಪಡೆಯುತ್ತಾರೆ. ಕೆಲವೊಮ್ಮೆ ಒಬ್ಬ ಹುಡುಗಿ 25 ಜನರನ್ನು ತಣಿಸಬೇಕಾಗುತ್ತದೆ. ಸುಮಾರು ಹತ್ತು ವರ್ಷಗಳಲ್ಲಿ ಅವಳನ್ನು ಕೊಳ್ಳಲಾದ ಹಣವನ್ನು ಯಜಮಾನಿಗೆ ಸಂಪಾದಿಸಿಕೊಟ್ಟಿರುತ್ತಾಳೆ. ಅಷ್ಟರೊಳಗಡೆ ಅವಳು ಸಂಪೂರ್ಣವಾಗಿ ನಾಶಹೊಂದಿರುತ್ತಾಳೆ. ಕಾಯಿಲೆಯಿಂದ ನರಳುವ ಆಕೆಯನ್ನು ಕೊನೆಗಾಲದಲ್ಲಿ ಹೊರಗೆ ಹಾಕಲಾಗುತ್ತದೆ.

ವೇಶ್ಯೆಯರನ್ನು ಗುಲಾಮರು ಎಂದು ಕರೆಯುವ ರುಚಿರಾ, ಅವರನ್ನು Sex Workers ಎಂದು ಕರೆಯಲು ನಿರಾಕರಿಸುತ್ತಾರೆ. ವೇಶ್ಯಾವೃತ್ತಿಯ ವ್ಯಾಪಾರಿ ಗುಣದಿಂದ ಅದಕ್ಕೆ ಕಾರಣಕರ್ತರಾದ ಪಿಂಪ್ಸ್‌ಗಳು, ಯಜಮಾನಿಯರು, ಪೋಲೀಸರು, ರಾಜಕೀಯ ವ್ಯಕ್ತಿಗಳು ಹೆಚ್ಚಿನ ಲಾಭ ಪಡೆಯುತ್ತಾರೆ. ಮಹಾರಾಷ್ಟ್ರದಲ್ಲಿ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ವೇಶ್ಯಾವಾಟಿಕೆಗಳನ್ನು ತಮ್ಮ ಕೈಯಲ್ಲಿಡಿದುಕೊಳ್ಳಲು ಹೊಡೆದಾಡುತ್ತವೆ. ಕಾಮಾಟಿಪುರವನ್ನು ನಿಯಂತ್ರಿಸುವರು ರಾಜಕೀಯ ವ್ಯಕ್ತಿಗಳೊಂದಿಗೆ ಸಂಬಂದ ಹೊಂದಿದ ಪುರುಷರು.

ವೇಶ್ಯಾವಾಟಿಕೆಯಲ್ಲಿರುವ ಎಳೆಯ ಮುಗ್ಧ ಬಾಲಕಿಯರ ಭವಿಷ್ಯವೇನು? ಇಂತಹ ಬಾಲಕಿಯರು ಈಗಾಗಲೇ ಏಯ್ಡ್ಸ್‌ನಿಂದ ತತ್ತರಿಸುತ್ತಿದ್ದಾರೆ. ನೇಪಾಳದಲ್ಲಿ ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗೆ ರಫ್ತು ಮಾಡುವುದು ಒಂದು ದೊಡ್ಡ ವ್ಯಾಪಾರವಾಗಿಬಿಟ್ಟಿದೆ.

ವೇಶ್ಯಾವೃತ್ತಿಯನ್ನು ಕಾನೂನು ಸಮ್ಮತಗೊಳಿಸುವುದು, ಈ ವೃತ್ತಿಯನ್ನು ನಡೆಸಲು ಮಹಿಳೆಯರಿಗೆ ಪರವಾನಗಿ ನೀಡುವುದನ್ನು ಜನವಾದಿ ಮಹಿಳಾ ಸಂಘಟನೆ ವಿರೋಧಿಸುತ್ತದೆ. ಹೀಗೆ ಪರವಾನಗಿ ನೀಡುವ ಬೇಡಿಕೆಯನ್ನು ಮುಂದಿಡುವುದರ

ಮೂಲಕ ಹೆಚ್ಚು ಹೆಚ್ಚು ಹೆಣ್ಣು ಮಕ್ಕಳನ್ನು ಪುನಃ ಈ ಕೂಪಕ್ಕೆ ತಳ್ಳಲು ಪ್ರೇರೇಪಿಸಿದಂತಾಗುತ್ತದೆ. ವೇಶ್ಯೆಯರನ್ನು Sex workers ಎಂದು ಕರೆಯುವುದನ್ನು ನಾವು ಒಪ್ಪಿಕೊಳ್ಳುವುದಿಲ್ಲ.

ಇಂದಿನ ಜಾಗತೀಕರಣ ಹಾಗೂ ಮುಕ್ತ ಆರ್ಥಿಕ ನೀತಿಯ ಹಿನ್ನಲೆಯಲ್ಲಿ ನಾವು ಇದನ್ನು ನೋಡಬೇಕಾಗುತ್ತದೆ. ವೇಶ್ಯಾವೃತ್ತಿಗೆ ಪರವಾನಿಗೆಯನ್ನು ನೀಡಿದರೆ, ಈ ವೃತ್ತಿಯನ್ನು ಒಂದು ವ್ಯಾಪಾರವೆಂದು ಪರಿಗಣಿಸಿಧಂತಾಗುತ್ತದೆ. ಇಂದು ಪ್ರವಾಸೋದ್ಯಮ ಬೆಳೆಯುತ್ತಿರುವುದೆ ಸ್ತ್ರೀಯರನ್ನು ಒಂದು ಭೋಗದ ವಸ್ತುವನ್ನಾಗಿ ಪರಿಗಣಿಸಿ, ಕಾರವಾರ, ಮಂಗಳೂರು ಹಾಗೂ ಇತರ ಕಡೆಗಳಲ್ಲಿ ರಿಸಾರ್ಟ್‌ಗಳನ್ನು ಸ್ಥಾಪಿಸುವುದು, ಅದಕ್ಕೆ ಪೂರಕವಾದ ಜಾಹಿರಾತುಗಳನ್ನು ನೀಡುವುದು ಇಂತಹ ಚಟುವಟಿಕೆಗಳು ಈಗಾಗಲೇ ವ್ಯವಸ್ಥಿತವಾಗಿ ನಡೆಯುತ್ತಿವೆ.

ಥೈಲ್ಯಾಂಡ್ ಇವತ್ತು ಸೆಕ್ಸ್ ಟೂರಿಸಂಗೆ ಸ್ವರ್ಗವೆನಿಸಿದೆ. ಮುಕ್ತ ಆರ್ಥಿಕ ನೀತಿಯ ಹಿನ್ನಲೆಯಲ್ಲಿ ನಾವು ಇದನ್ನು ಸಂಪೂರ್ಣವಾಗಿ ವಿರೋಧಿಸಬೇಕಾಗಿದೆ. ಈ ಪ್ರವಾಸೋದ್ಯಮ ಸ್ತ್ರೀಯರನ್ನು ಮಾರಾಟ ಮಾಡುವುದರ ಮೂಲಕ ತನ್ನ ವ್ಯಾಪಾರವನ್ನು ನಡೆಸುತ್ತಿದೆ.

ಈ ವೃತ್ತಿಯಲ್ಲಿರುವ ಸ್ತ್ರೀಯರು ಸಂಘಟನೆಯಾಗುವುದೇ ಬೇಡ ಎಂದು ಹೇಳುವವರೂ ಇದ್ದಾರೆ, ಇದು ಸರಿಯಲ್ಲ. ಈಗಾಗಲೇ ಈ ವೃತ್ತಿಯಲ್ಲಿ ತೊಡಗಿಸಿಕೊಂಡ ಮಹಿಳೆಯರು ಸಂಘಟನೆಯಾಗುವುದು ಅಗತ್ಯವಾಗಿದೆ. ಅವರೂ ಸಹ ಯೂನಿಯನ್ ರಚಿಸಿಕೊಳ್ಳಬೇಕು, ತಮ್ಮ ವೃತ್ತಿಯಲ್ಲಿ ಎದುರಿಸುವ ತೊಂದರೆ, ಪಿಂಪ್ಸ್ ಹಾಗೂ ಮಾಲೀಕರಿಂದ, ಪೋಲೀಸರಿಂದ ಎದುರಿಸುವ ಕಿರುಕುಳ ಮುಂತಾದವುಗಳಿಂದ ರಕ್ಷಣೆ ಪಡೆಯಲು ಸಂಘಟಿತರಾಗಲೇಬೇಕಾಗಿದೆ,

ಮಹಿಳೆಯರು ವೇಶ್ಯಾವೃತ್ತಿಗೆ ಬಲಿಪಶುಗಳಾಗುವುದನ್ನು ತಪ್ಪಿಸಬೇಕು. ಅವರು ಈ ವೃತ್ತಿಯಿಂದ ಹೊರಬರಲು ಪೂರಕವಾಗುವಂತೆ ಉದ್ಯೋಗ ಅವಕಾಶವನ್ನು ಕಲ್ಪಿಸಿಕೊಡಬೇಕು. ಪುನರ್ವಸತಿಯನ್ನು ಕಲ್ಪಿಸಿಕೊಡಬೇಕು. ಪ್ರಸ್ತುತ ಸಂದರ್ಭದಲ್ಲಿ ವೇಶ್ಯಾವೃತ್ತಿಯನ್ನು ಕಾನೂನು ಸಮ್ಮತಗೊಳಿಸಿ ಲೈಸನ್ಸ್ ನೀಡಿದರೆ, ನಮ್ಮ ಹೆಣ್ಣು ಮಕ್ಕಳನ್ನು ಈ ಕೂಪಕ್ಕೆ ತಳ್ಳಲು ಪ್ರೇರಣೆ ನೀಡಿದಂತಾಗುತ್ತದೆ.

ವಿಮಲಾ
ಜನವಾದಿ ಮಹಿಳಾ ಸಂಘಟನೆ

ಕೇಳುವರಿಲ್ಲದ ಅಮಾಯಕರು

ಹೈದರಾಬಾದ್‌ನಲ್ಲಿ ಏಡ್ಸ್ ರೋಗದ ಲಕ್ಷಣಗಳು ಕಂಡುಬಂದ ತಕ್ಷಣ ಹದಿನಾಲ್ಕು ಜನ ಹೆಂಗಸರನ್ನು ಜೈಲಿನಲ್ಲಿ ಇಡಲಾಗಿದೆ. ಅಪ್ರಾಪ್ತ ವಯಸ್ಸಿನ ಬಾಲಕಿಯರನ್ನು ಬಲಾತ್ಕಾರವಾಗಿ ವೇಶ್ಯಾವೃತ್ತಿಗೆ ಸೆಳೆಯುತ್ತಿರುವ ವಿಷಯ ಕುರಿತು ವಿಚಾರಣೆ ನಡೆಸುವಂತೆ ಲೇಬರ್ ಲಿಬರೇಶನ್ ಫ್ರಂಟ್ ಸ್ವಯಂ ಸೇವಾ ಸಂಸ್ಥೆ ಹೈಕೋರ್ಟನ್ನು ಪತ್ರ ಮುಖೇನ ಕೋರಿತ್ತು. ಈ ಕೋರಿಕೆಯ ಪರಿಣಾಮವಾಗಿ ಮೆಹಬೂಬ್ ಮೆಹಂದಿ ಕೆಂಪು ದೀಪದ 33 ಮನೆಗಳ ಮೇಲೆ ದಾಳಿ ಮಾಡಲಾಯಿತು. ಈ ದಾಳಿಯ ನಂತರ 56 ಹೆಂಗಸರನ್ನು ರಕ್ಷಿಸಿ, ಅವರನ್ನು ಸರ್ಕಾರದ 'ರಕ್ಷಣಾ' ಗೃಹದಲ್ಲಿ ಇಡಲಾಯಿತು. ಈ ದಾಳಿಯಲ್ಲಿ ತಪ್ಪಿಸಿಕೊಂಡ 3 ಜನ ಹೆಂಗಸರು ವಾಪಸ್ಸು ಹೋಗಲ್ಲು ಮನೆಯಿಲ್ಲದೆ, ಸರಿಯಾದ ಕೆಲಸವೂ ಇಲ್ಲದೆ, 'ರಸ್ತೆ'ಗಳಲ್ಲಿ ಹಸಿವಿನಿಂದ 'ಸತ್ತರು' ಅಥವಾ ಸಾಯಿಸಲಾಯಿತು.

ಹೈಕೋರ್ಟ್ ನೀಡಿದ ಆದೇಶದ ಮೇರೆಗೆ 21 ಹೆಂಗಸರ ಮೇಲೆ ಏಡ್ಸ್ ರೋಗದ ಪರೀಕ್ಷೆಯನ್ನು ನಡೆಸಲಾಯಿತು. ಇವರಲ್ಲಿ 7 ಜನರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿ ಉಳಿದವರನ್ನು ರಕ್ಷಣಾಲಯದಲ್ಲಿ ಇಡಲಾಗಿದೆ. ಈ ಮಹಿಳೆಯರ ಪ್ರಕಾರ ಉದ್ದೇಶಪೂರ್ವಕವಾಗಿ ಅವರ ಮೇಲೆ ಏಡ್ಸ್ ರೋಗದ ಪರೀಕ್ಷೆಯನ್ನು ನಡೆಸಲಾಗಿದೆ. ಈ ಪರೀಕ್ಷೆಯನ್ನು ಮಾಡುವ ಮೊದಲು ಅವರ ಒಪ್ಪಿಗೆ ಪಡೆಯಲಾಗಿರಲಿಲ್ಲ. 14 ಜನ ಹೆಂಗಸರನ್ನು ಅವರ ಕುಟುಂಬದವರಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಇಡಲಾಗಿದೆ. ಏಡ್ಸ್ ರೋಗದ ಲಕ್ಷಣಗಳು ಕಂಡುಬಂದಿರುವುದರಿಂದ ಅವರ ಬದುಕುವ ಹಕ್ಕನ್ನು ಸಹ ಕಿತ್ತುಕೊಳ್ಳಲಾಗಿದೆ. ಆದರೆ ಕಾನೂನಿನ ಪ್ರಕಾರ ಅವರ ಮೇಲೆ ಯಾವುದೇ ಆರೋಪವನ್ನು ಹೊರಿಸಲಾಗಿಲ್ಲ. ಹೈಕೋರ್ಟ್ ಸಲ್ಲಿಸಿದ ವರದಿಯ ಪ್ರಕಾರ ಶೇ. 80% ಹೆಂಗಸರು ತಮ್ಮ ದುಡಿಮೆಯಿಂದ ಬಂದ ಹಣವನ್ನು ತಮ್ಮ ಮಕ್ಕಳಿಗೆ ಖರ್ಚು ಮಾಡಿದರೆ ಶೇ. 30ರಷ್ಟು ಹೆಂಗಸರು ಮನೆಗಳಿಗೆ ಕಳಿಸಿ ಕೊಡುತ್ತಾರೆ.

ವೇಶ್ಯೆಯರಿಗೆ ಲೈಸನ್ಸ್ ನೀಡಿದರೆ, ಅವರ ವೃತ್ತಿಯನ್ನು ಕಾನೂನು ಬದ್ಧಗೊಳಿಸುವುದರ ಜೊತೆಗೆ ಅವರನ್ನು ಶೋಷಣೆ ಮಾಡುವ ಶಕ್ತಿಗಳಿಂದ ಸಹ ರಕ್ಷಣೆಯನ್ನು ಪಡೆಯಬಹುದು. ವೇಶ್ಯೆಯರು ನಮ್ಮ ನಡುವಿನ ನಾಗರೀಕರಾಗಿದ್ದರೂ ಪೋಲೀಸರು ತಮ್ಮ ಇಷ್ಟಾನುಸಾರ ಅವರ ಮನೆಗಳ ಮೇಲೆ ದಾಳಿ ನಡೆಸಿ ಅವರನ್ನು ಮನೆಯಿಂದ ಹೊರ ಹಾಕಬಹುದು. ಜೈಲಿನಲ್ಲಿರುವ ಮೆಹಂದಿ ಮಹಿಳೆಯರ ಬಗ್ಗೆ ಸರ್ಕಾರ ನಿರ್ಲಿಪ್ತವಾಗಿದೆ. ವೇಶ್ಯೆಯರಿಗೆ ಲೈಸನ್ಸ್ ನೀಡಿದರೆ ಪೋಲೀಸರಿಂಧ, ಅವರನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಶಕ್ತಿಗಳಿಂದ ಸ್ವಲ್ಪ ಮಟ್ಟಿಗೆ ರಕ್ಷಣೆಯನ್ನು ಪಡೆಯಬಹುದು.

ಸಾಮಾಜಿಕ ನ್ಯಾಯಕ್ಕೆ ಆರೋಗ್ಯಪೂರ್ಣ ಸಂವಾದ

"ಪುರಾತನ ಭಾರತದಲ್ಲಿನ ವೇಶ್ಯೆಯರ ಸ್ಥಾನಮಾನ ಇಂಗ್ಲೆಂಡಿನ ಅಥವಾ ಇತರ ಜನಾಂಗಗಳಲ್ಲಿ ಇರುವ ಅವನತಿಯನ್ನು ಹೊಂದಿರಲಿಲ್ಲ. ಅವರಿಗೆ ಕಾನೂನು ಸಮ್ಮತವಾದ ವಿಶೇಷ ಹಕ್ಕುಬಾಧ್ಯತೆಗಳು ಇದ್ದವು. ಹೆಚ್ಚು ನಾಗರೀಕ ದೇಶಗಳಂತೆ ಅವರು ತಿರಸ್ಕೃತ ಹಾಗೂ ಅನುಕಂಪಪೂರಿತ ವಸ್ತುಗಳಂತೆ ಜೀವನ ನಿರ್ವಹಣೆಗಾಗಿ ಈ ವೃತ್ತಿಯನ್ನು ಅವಲಂಭಿಸಿದಂತೆ ಅವರು ಇರಲಿಲ್ಲ". (ಹೋಂ ಜ್ಯುಡಿಶಿಯಲ್ ಪ್ರೆಸ್., ನಂ. 48, ರಾಷ್ಟ್ರೀಯ ಪತ್ರಾಗಾರ).

ಬ್ರಿಟಿಶರ ಆಳ್ವಿಕೆಯ ಸಂದರ್ಭದಲ್ಲಿ ಮೇಲಿನ ವಾತಾವರಣವಿದ್ದರೂ, "ವೇಶ್ಯಾವೃತ್ತಿಗೆ ಅಂಟಿಕೊಂಡ ಕಳಂಕ ಆಶ್ಚರ್ಯಕರವಾಗಿ ಇಂದಿಗೂ ಇದೆ. ಅನೈತಿಕತೆಯ ಕಲ್ಪನೆಯ ಹಿನ್ನಲೆಯಲ್ಲಿ ವೇಶ್ಯೆಯರ ಅಸ್ತಿತ್ವವನ್ನೇ ಪ್ರಶ್ನಿಸಲಾಗುತ್ತದೆ. ಸಾಮಾಜಿಕ ಅನಾಹುತವನ್ನು ನಿರೀಕ್ಷಿಸುವವರೆಲ್ಲಾ ವೇಶ್ಯಾವೃತ್ತಿಯನ್ನು ಹೇಗೆ ಕಾನೂನು ಸಮ್ಮತಿಗೊಳಿಸಲಾಗುತ್ತದೆಯೆಂದು ಪ್ರಶ್ನಿಸುತ್ತವೆ. ಹಿಂದೆ ನಮ್ಮ ಸಮಾಜ 'ವೇಶ್ಯಾವೃತ್ತಿಯನ್ನು ಅರ್ಥಮಾಡಿಕೊಳ್ಳುತ್ತಿದ್ದ ಆಧಾರದ ಮೇಲೆ ಇಂದು ಈ ಸಮಸ್ಯೆಯನ್ನು ಕುರಿತು ಸಂವಾದ ನಡೆಸಲು ಸಾಧ್ಯವಿಲ್ಲ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವ ವೇಶ್ಯೆಯರು ವಿಭಿನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಇದು ಯಾವುದೇ ತಾತ್ವಿಕ ನೆಲೆಗಟ್ಟನ್ನು ಒದಗಿಸುವುದಿಲ್ಲ. ವೇಶ್ಯೆಯರ ಬದುಕಿನ ವಿಭಿನ್ನ ಪರಿಸ್ಥಿತಿ ಅವರ ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ ನಿಷ್ಕ್ರೀಯತೆಯೊಡನೆ ಹೋರಾಟದ ವಾಸ್ತವಾಂಶಗಳನ್ನು ಪ್ರತಿಬಿಂಬಿಸುತ್ತದೆ. ವೇಶ್ಯೆಯರ ಸಮಸ್ಯೆಗಳು ಅವರ ಅಸ್ಥಿತ್ವಕ್ಕೆ ನೇರವಾಗಿ ಸಂಬಂಧವಿರುವುದನ್ನು ಮಹಿಳಾ ಸಂಘಟನೆಗಳು ಹಾಗೂ ಸಾಮಾಜಿಕ ಕಾಳಜಿಯುಳ್ಳವರು ಮನಗೊಳ್ಳಬೇಕಾಗಿದೆ.

ಸಾಮಾಜಿಕ ನ್ಯಾಯಕ್ಕಾಗಿ ನಡೆಯುವ ಹೋರಾಟದಲ್ಲಿ ತಮ್ಮನ್ನು ತಾವು ಅರ್ಥಮಾಡಿಕೊಳ್ಳುವ ಹಾಗೂ ಪುನರ್ರಚನೆಯ ಪ್ರಕ್ರಿಯೆಯಲ್ಲಿ ಮಹಿಳಾ ಸಂಘಟನೆಗಳು ಮಹತ್ವದ ಪಾತ್ರವನ್ನು ವಹಿಸಬಹುದಾಗಿದೆ. ಸಂಪ್ರದಾಯ ಪರಿಕಲ್ಪನೆಗಿಂತ ಭಿನ್ನವಾದ ಮಹತ್ವಾಕಾಂಕ್ಷೆಯ ದೃಷ್ಟಿಕೋನವನ್ನು ಜನರ ಮುಂದಿಡಬೇಕಾಗುತ್ತದೆ. ಈ ಸಮಾಜದೊಡನೆ ಸಮಸ್ಯೆಯ ಅವಿಭಾಜ್ಯ ಸಂಬಂಧವನ್ನು ಸಹ ಮುಂದಿಡಬೇಕಾಗುತ್ತವೆ.

'ವೇಶ್ಯಾವೃತ್ತಿ''ಯನ್ನು ಸಾಂತನಗೊಳಿಸುವುದರ ಮೂಲಕ ಅಥವಾ ಲೈಸನ್ಸ್ ನೀಡುವುದರ ಮೂಲಕ ನಾವು "ಹೊಸ ಮಾದರಿಯ" ಮಾನವೀಯ ಸಂಬಂಧ ಹಾಗೂ ಸಂವಾದಕ್ಕೆ ಅಡಿಪಾಯ ಹಾಕಿ ಹಿಂದೆ ಹಿಂದೆ ದೇವದಾಸಿಯರಾಗಿದ್ದು ಕ್ರಮೇಣ ವೇಶ್ಯಾವೃತ್ತಿಯನ್ನು ಅನಿವಾರ್ಯವಾಗಿ ಅವಲಂಭಿಸಬೇಕಾದ ಮಹಿಳೆಯರು "ಸಮಾಜ ಯಾವ ಹಂತದಲ್ಲೂ ನಮ್ಮೊಡನೆ ಸಂವಾದ ನಡೆಸಲು ಸಿದ್ಧವಿಲ್ಲ. ಸಮಾಜದೊಂದಿಗೆ ಆರೋಗ್ಯಪೂರ್ಣ ಸಂಬಂಧವನ್ನು ಹೊಂದುವ ಅವಕಾಶವನ್ನು ನಮಗೆ ನಿರಾಕರಿಸಲಾಗಿದೆಯೆನ್ನುತ್ತಾರೆ. ಸಾಮಾಜಿಕ ನ್ಯಾಯವನ್ನು ಪಡೆಯುವಲ್ಲಿ ಪೂರಕವಾದ ಹೊಸ ಸಂಬಂಧಗಳನ್ನು ಸೃಷ್ಟಿಸಲು ಈ ಸಂವಾದ ನೆರವಾಗಬಹುದೆಂದು ನಾನು ಭಾವಿಸುತ್ತೇನೆ.

ಅವರ ಬೇಡಿಕೆಗಳು

1. ನಮ್ಮ ಜೀವನದ ಶೈಲಿಯನ್ನು ಮುಚ್ಚಿಡುವುದು ಮಾನಸಿಕವಾಗಿ ಒಂದು ಹೊರಲಾರದ ಹೊರೆ.
2. ಸಮಾಜ ತಾನು ಈ ಸಮಸ್ಯೆಯಿಂದ ತಪ್ಪಿಸಿಕೊಂಡು ನಮ್ಮ ಮೇಲೆ ಕಳಂಕ ಹೊರಿಸುವುದನ್ನು ನಿಲ್ಲಬೇಕು.
3. ಸಮಾಜದ ಎಲ್ಲಾ ವರ್ಗಗಳಿಗೆ ನಾವು ಸೇವೆ ಸಲ್ಲಿಸುವುದರಿಂದ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದು ಸರ್ಕಾರದ ಜವಾಬ್ದಾರಿ.

ಅವರ ಮೇಲಿನ ಈ ಬೇಡಿಕೆಗಳನ್ನು ಗಮನಿಸಿ ಅವರಿಗೆ ಈ ಕೆಳಗಿನ ಸೌಲಭ್ಯಗಳು ದೊರೆಕಿಸಬೇಕು.

1. ವೇಶ್ಯೆಯರಿಗೆ ನಿವೃತ್ತಿ ವೇತನ ದೊರೆಯಬೇಕು.
2. ಪ್ರಾವಿಡೆಂಟ್ ಫಂಡ್ ಹಾಗೂ ಸಾಲ ಸೌಲಭ್ಯಗಳು ಅವರಿಗೆ ಸಿಗಬೇಕು.
3. ಆರೋಗ್ಯ ಸೌಲಭ್ಯ ಉಚಿತವಾಗಿ ದೊರೆಯಬೇಕು.
4. ಅವರ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

ಸಾಮಾಜಿಕ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ಅವರೊಡನೆ ಚರ್ಚೆ ನಡೆಸಿ ವೇಶ್ಯಾವೃತ್ತಿಯನ್ನು ಕಾನೂನು ಸಮ್ಮತಗೊಳಿಸಬೇಕು.

ಮೀರಾ ಚಕ್ರವರ್ತಿ
ಮಾನಿನಿ
ರಾಜ್ಯಮಹಿಳಾ ಆಯೋಗದ ಸದಸ್ಯೆ

ಅಪ್ರಾಪ್ತ ವಯಸ್ಸಿನ ಬಾಲಕಿಯರು ಮತ್ತು ವೇಶ್ಯಾವೃತ್ತಿ

ಪ್ರಸ್ತುತ ಲೋಕ ತಾಂತ್ರಿಕ ವ್ಯವಸ್ಥೆಯಲ್ಲಿನ ಬಡತನದ ಸಮಸ್ಯೆಯು ಹೆಣ್ಣು ಮಕ್ಕಳ ಮೇಲೆ, ಮಹಿಳೆಯರ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ. ಶತ ಶತಮಾನಗಳಿಂದಲೂ ಪುರುಷನಿಂದ ಮಹಿಳೆ ಲೈಂಗಿಕ ಶೋಷಣೆಗೊಳಪಡುತ್ತಾ ಬಂದಿದ್ದಾಳೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ಶೋಷಣೆ ತೀವ್ರವಾಗುತ್ತಿದೆ. ಸಣ್ಣ ವಯಸ್ಸಿನಲ್ಲೇ ವೇಶ್ಯಾವೃತ್ತಿಗೆ ತಳ್ಳಲ್ಪಟ್ಟ ಹೆಣ್ಣು ಮಕ್ಕಳು ಶಾಪಗ್ರಸ್ತ ಜೀವನ ನಡೆಸುತ್ತಾರೆ, ಬಾಲ ವೇಶ್ಯಾವೃತ್ತಿ ವಿಶ್ವವ್ಯಾಪಿಯಾಗಿದೆ. ಪಶ್ಚಿಮ ರಾಷ್ಟ್ರಗಳಲ್ಲಿ ಶಿಕ್ಷಣ ಹಾಗೂ ಮಾನವ ಹಕ್ಕುಗಳ ಹೋರಾಟದಿಂದಾಗಿ ವ್ಯವಸ್ಥಿತ ಬಾಲವೇಶ್ಯಾವೃತ್ತಿಯು ಕಂಡು ಬರುವುದಿಲ್ಲ. ನಮ್ಮ ದೇಶದಲ್ಲಿ ಬಾಲವೇಶ್ಯಾವೃತ್ತಿ ಸಮಸ್ಯೆ ಕುರಿತಂತೆ ವಿಧಾನಸಭೆ, ಲೋಕಸಭೆಗಳಲ್ಲಿ, ಪತ್ರಿಕೆಗಳಲ್ಲಿ ಚರ್ಚೆಯಾಗಿದೆಯೇ ಹೊರತು ಕಾರ್ಯರೂಪದಲ್ಲಿ ಹೆಚ್ಚಿನದೇನೂ ಆಗಿಲ್ಲ.

ಭಾರತದಲ್ಲಿ ಇಲ್ಲಿಯವರೆಗೂ ವೇಶ್ಯಾವೃತ್ತಿಗೆ ತಳ್ಳಲ್ಪಡುವ ಹೆಣ್ಣು ಮಕ್ಕಳ ಅಧಿಕೃತ ಅಂಕಿ ಅಂಶ ತಿಳಿದುಬಂದಿಲ್ಲ. ವೇಶ್ಯೆಯಯರಲ್ಲಿ ಶೇ. 20ರಷ್ಟು ಅಪ್ರಾಪ್ತ ವಯಸ್ಕರು. ಆಂಧ್ರ ಪ್ರದೇಶ, ಕರ್ನಾಟಕ, ತಮಿಳುನಾಡು, ಪ. ಬಂಗಾಳ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ನಡೆದ ಅಂಕಿ ಅಂಶಗಳ ಪ್ರಕಾರ ಶೇ. 94.6ರಷ್ಟು ಭಾರತೀಯರು, 2.4ರಷ್ಟು ನೇಪಾಲಿ, 2.7ರಷ್ಟು ಬಾಂಗ್ಲಾದೇಶದವರಿದ್ದಾರೆ. ಅವರಲ್ಲಿ 74.36ರಷ್ಟು ಹಿಂದುಗಳಿದ್ದರೆ, 10.76ರಷ್ಟು ಮುಸ್ಲಿಂರು 35ರಷ್ಟು ಕ್ರಿಶ್ಚಿಯನ್ನರಿದ್ದಾರೆ.

ಒಂದು ವರದಿಯ ಪ್ರಕಾರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸುಮಾರು 1ಕೋಟಿ ಬಾಲಕರು, ಬಾಲಕಿಯರು ಲೈಂಗಿಕ ಶೋಷಣೆಯ ಬಲಿಪಶುಗಳು. ಶೇ. 10ರಷ್ಟು ಪ್ರವಾಸಿಗರಿಂದ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳು ಲೈಂಗಿಕ ಶೋಷಣೆಗೊಳಪಡುತ್ತಾರೆ. ಕೇಂದ್ರಿಯ ಸಮಾಜ ಕಲ್ಯಾಣ ಇಲಾಖೆಯ 1991-92ರ ಬೋರ್ಡ್‌ನ ಪ್ರಕಾರ ದೇಶದಲ್ಲಿ 70,000 - 1,00,000ರಷ್ಟು ವೇಶ್ಯೆಯರಿದ್ದಾರೆ. ಅವರಲ್ಲಿ ಶೇ. 15ರಷ್ಟು ವೇಶ್ಯೆಯರು 16 ವಯಸ್ಸಿಗಿಂತ ಕಡಿಮೆ ವಯಸ್ಸಿನವರು. ಶೇ. 25ರಷ್ಟು ವೇಶ್ಯೆಯರು 16-17 ವಯಸ್ಸಿನೊಳಗಿನವರು. ನಾರ್ವೇ ಸರ್ಕಾರದ ವರದಿಯ ಪ್ರಕಾರ ಭಾರತದಲ್ಲಿ 10 ಲಕ್ಷ, ಪ್ಯಾರಿಸ್‌ನಲ್ಲಿ 3,000, ಅಮೇರಿಕಾದಲ್ಲಿ 3 ಲಕ್ಷ, ಇಂಗ್ಲೆಂಡಿನಲ್ಲಿ 15,000, ಹೆಂಗಸರು ಲೈಂಗಿಕ ದಂಧೆಯಲ್ಲಿದ್ದಾರೆ. ದಕ್ಷಿಣ ಪೂರ್ವ ಏಶಿಯಾ ದೇಶಗಳಲ್ಲಿ 7-12 ವರ್ಷ ವಯಸ್ಸಿನ ಹುಡುಗಿಯರಿಗೆ ಹಾರ್ಮೋನ್ ಇಂಜೆಕ್ಷನ್ ಗಳನ್ನು ನೀಡಿ ಸಮಯಕ್ಕೆ ಮೊದಲೇ ಯುವತಿಯರನ್ನಾಗಿಸಿ ಪ್ರವಾಸಿಗರ ಬೊಂಬೆಗಳನ್ನಾಗಿಸಿ ಮಾರಟ ಮಾಡಲಾಗುತ್ತದೆ. ಯೂನಿಸೆಫ್‌ನ ವರದಿಯೊಂದರಂತೆ ಜಗತ್ತಿನಲ್ಲಿ 20 ಲಕ್ಷ ಅಪ್ರಾಪ್ತ ವಯಸ್ಸಿನ ಹುಡುಗಿಯರು (17 ವರ್ಷಕ್ಕಿಂತ ಕಡಿಮೆ ವಯಸ್ಸಿನವರು) ವೇಶ್ಯಾವೃತ್ತಿ ಯಲ್ಲಿದ್ದಾರೆ.

ಅಪ್ರಾಪ್ತ ವಯಸ್ಸಿನ ಬಾಲಕಿಯರು ವೇಶ್ಯಾವೃತ್ತಿಯನ್ನು ಆರಿಸಿಕೊಳ್ಳುವುದರ ಹಿಂದೆ ಅನೇಕ ಕಾರಣ, ಪರಿಸ್ಥಿತಿಗಳಿವೆ. ಒಂದು ಅಧ್ಯಯನದ ಪ್ರಕಾರ ಶೇ. 44ರಷ್ಟು ಬಾಲಕಿಯರು ವೇಶ್ಯಾವೃತ್ತಿಗಿಳಿಯುವುದು ಬಡತನದಿಂದಾಗಿ, ಬಡತನವಲ್ಲದೆ ಗೂಂಡಾಗಿರಿ, ಅಪಹರಣ, ಮನೆಯಿಂದ ಓಡಿಹೋಗುವುದು, ಸಿನಿಮಾರಂಗದ ಆಕರ್ಷಣೆ, ದೇವದಾಸಿಯಂತಹ ಧಾರ್ಮಿಕ ಆಚರಣೆಗಳು, ಸಾಮಾಜಿಕ ಆರ್ಥಿಕ ಸ್ಥಿತಿ, ಅಶ್ಲೀಲ ಸಾಹಿತ್ಯ, ಉಪಭೋಗ ಸಂಸ್ಕೃತಿಯ ಪ್ರಚಾರ, ಸಮುದಾಯ ಅಥವಾ ಕುಟುಂಬದಲ್ಲಿನ ಹೊಡೆದಾಟ, ಆಮಿಷ ತೋರಿಸಿ ಮೋಸ ಮಾಡುವುದು, ಅನಾಥರಾಗಿರುವುದು, ಮುಕ್ತ ಮಾರುಕಟ್ಟೆ ಇತ್ಯಾದಿ ಕಾರಣಗಳು ಬಾಲವೇಶ್ಯಾವೃತ್ತಿಗೆ ಕಾರಣವಾಗಿದೆ.

Women in AIDS ಎಂಬ ಸಂಘಟನೆಯ ಪ್ರಕಾರ ಪುರುಷರ ಮೂಲಕ ಬಾಲವೇಶ್ಯೆಯರಲ್ಲಿ ಏಡ್ಸ್ ಹೆಚ್ಚುತ್ತಿದೆ. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಘಟನೆಯ ಪ್ರಕಾರ 31.3. 1996ರವರೆಗೆ ಭಾರತದಲ್ಲಿ 713 ಏಡ್ಸ್ ರೋಗಿಗಳಲ್ಲಿ 162 ಜನ ಬಾಲವೇಶ್ಯೆಯರಾಗಿದ್ದರು. ಇದಕ್ಕೆ ಒಂದು ಕಾರಣವೆಂದರೆ ಅಪ್ರಾಪ್ತ ಬಾಲಕಿಯರೊಂದಿಗಿನ ಸಂಭೋಗದಿಂದ ಪುರುಷರು HIVಯಿಂದ ಮುಕ್ತರಾಗ ಬಹುದೆಂಬ ಕೆಟ್ಟ ನಂಬಿಕೆ,

ದುಃಖದ ವಿಷಯವೆಂದರೆ ಯಾವ ಖಾಯಿಲೆಯಿಂದ ದೊಡ್ಡವರು ಬಚಾವಾಗುತ್ತಿದ್ದಾರೊ ಅದೆ ಖಾಯಿಲೆಗೆ ಹೆಣ್ಣು ಮಕ್ಕಳನ್ನು ಗೊತ್ತಿದ್ದು ತಳ್ಳಲಾಗುತ್ತಿದೆ.

ಬಾಲವೇಶ್ಯಾವೃತ್ತಿಯನ್ನು ಸಂಘಟಿತರಾಗಿ ತೊಡೆದು ಹಾಕಲು 187 ದೇಶಗಳು ಅಂತರರಾಷ್ಟ್ರೀಯ ಬಾಲ ಅಧಿಕಾರ ಕರಡಿಗೆ ಸಹಿ ಹಾಕಿವೆ. 1994ರಲ್ಲಿ ಕೂಪನ್‌ಹೇಗನ್‌ನಲ್ಲಿ ನಡೆದ ಸಾಮಾಜಿಕ ಸಮ್ಮೇಳನದಲ್ಲಿ, ಅದೇ ವರ್ಷ ಕೈರೋದಲ್ಲಿ ನಡೆದ ಅಂತರರಾಷ್ಟ್ರೀಯ ಜನಸಂಖ್ಯಾ ಮತ್ತು ಅಭಿವೃದ್ಧಿ

ಸಮ್ಮೇಳನದಲ್ಲಿ ಹಾಗೂ ಬೀಜಿಂಗ್‌ನಲ್ಲಿ 1995ರಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ನಡೆದ ಚರ್ಚೆಗಳಿಂದಾಗಿ 27-31 ಆಗಸ್ಟ್ 1996ರಂದು ಸ್ಟಾಕ್‌ಹೋಂನಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲಿನ ಲೈಂಗಿಕ ಶೋಷಣೆ ವಿರುದ್ಧ ವಿಶ್ವ ಕಾಂಗ್ರೆಸ್‌ನಲ್ಲಿ ಬಲವಾದ ದನಿ ಎತ್ತಲಾಯಿತು. ಈ ಸಮಸ್ಯೆಯ ನಿವಾರಣೆಗಾಗಿ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬಹುದು.

1. ಅಪರಾಧಿಯನ್ನು ಬಲಾತ್ಕಾರದ ಆಪಾದನೆಯ ಮೇಲೆ ಆಜೀವ ಕಾರಾಗೃಹವಾಸವನ್ನು, ಅಪಹರಣಕಾರರನ್ನು ಹಂತಕರೆಂಬ ಆಪಾದನೆಯ ಮೇಲೆ ದಂಡ ವಿಧಿಸಬೇಕು.

2. ದೇವದಾಸಿ ಅಥವ ಜೋಗುತಿ ಆಚರಣೆಗಳನ್ನು ನಿಲ್ಲಿಸಬೇಕು ಮತ್ತು ಅಪ್ರಾಪ್ತ ಮಕ್ಕಳನ್ನು ದೇಶದ ಹೊರಗೆ ಕಳಿಸುವುದನ್ನು ನಿಷೇಧಿಸಬೇಕು.

3. ಅಶ್ಲೀಲ ಸಾಹಿತ್ಯ ಹಾಗು ಸಿನಿಮಾಗಳ ಪ್ರಚಾರ-ಪ್ರಸಾರದ ಮೇಲೆ ಪ್ರತಿಬಂಧ ಹೇರಬೇಕು.

4. ಮಹಿಳಾ - ಮಕ್ಕಳ ಅಭಿವೃದ್ಧಿ ನಿಗಮದ ಮೂಲಕ ಲೈಂಗಿಕ ಶೋಷಣೆಗೊಳಗಾದ ಹೆಣ್ಣು ಮಕ್ಕಳಿಗಾಗಿ ಆರ್ಥಿಕ ಸಹಾಯ, ಉದ್ಯೋಗ, ಪುನರ್ವಸತಿಯ ವ್ಯವಸ್ಥೆಯಾಗಬೇಕು ಮತ್ತು ಆ ನಿಟ್ಟಿನಲ್ಲಿ ಇನ್ನು ಮಹತ್ವದ ಕ್ರಮಗಳನ್ನು ಕೈಗೊಳ್ಳಬೇಕು.

5. ಅನೈತಿಕ ಕೃತ್ಯ ನಿಷೇಧ ಕಾನೂನು ಮತ್ತು ಭಾರತೀಯ ದಂಡ ಸಂಹಿತೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ನಮ್ಮ ದೇಶದಲ್ಲಿ ಈ ಕಾನೂನುಗಳಿದ್ದರೂ ಸಮಸ್ಯೆಯು ಹೆಚ್ಚುತ್ತಲೇ ಬಂದಿದೆ. ಕಾನೂನಿನ ಪ್ರಕಾರ ಅಪ್ರಾಪ್ತ ಬಾಲಿಕೆಯರಾಗಲಿ, ಪ್ರಾಪ್ತ ವಯಸ್ಸಿನ ಬಾಲಿಕೆಯರಾಗಲಿ ಅವರುಗಳ ಮೇಲಿನ ಅತ್ಯಾಚಾರ ಅಪರಾಧಕ್ಕಾಗಿ ದಂಡನೆ ಒಂದೇ ರೀತಿಯದಾಗಿದೆ. ಕಾನೂನಿನ ಹಾಗು ನ್ಯಾಯಾಂಗದ ಜಟಿಲತೆಯಿಂದಾಗಿ ನ್ಯಾಯ ಸಿಕ್ಕೆ ಸಿಗುತ್ತದೆ ಎಂಬ ನಂಬಿಕೆಯಿಲ್ಲ. ಆದ್ದರಿಂದ ಕಾನೂನು ಹಾಗು ನ್ಯಾಯಾಂಗದ ಸರಳೀಕರಣದ ಅವಶ್ಯಕತೆಯಿದೆ.

6. ಪೋಲಿಸರು ಹಾಗು ನ್ಯಾಯಾಂಗ ದೃಢ ನಿಶ್ಚಯದಿಂದ ಕಾರ್ಯ ಪ್ರವೃತ್ತವಾದಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲಿನ ಲೈಂಗಿಕ ಶೋಷಣೆಯನ್ನು ನಿರ್ಮೂಲಗೊಳಿಸಬಹುದು.

7. ಪರಿಸ್ಥಿತಿಗನುಗುಣವಾಗಿ ಹೆಣ್ಣು ಮಕ್ಕಳನ್ನು ಆತ್ಮಸ್ಥೈರ್ಯ ತುಂಬುವಂತಹ, ತಮ್ಮನ್ನು ತಾವು ಲೈಂಗಿಕ ಶೋಷಣೆಯ ವಿರುದ್ಧ ರಕ್ಷಿಸಿಕೊಳ್ಳುವಂತಹ ನೀತಿಯನ್ನು ಜಾರಿಗೆ ತರುವ ಅವಶ್ಯಕತೆಯಿದೆ. ಈ ನೀತಿ ಒಂದು ರೀತಿಯ ಯುದ್ಧ ನೀತಿಯಂತಿರಬೇಕು. ಏಕೆಂದರೆ ಶವದ ಮೇಲೂ ಅತ್ಯಾಚಾರ ವೆಸಗುವಂತಹ ಪ್ರಪಂಚದಲ್ಲಿ ಆಗಷ್ಟೇ- ಜನ್ಮವೆತ್ತ ಹೆಣ್ಣು ಕೂಸು ಸಹ ಅಪಾಯಕ್ಕೆ ಹೊರತಲ್ಲ.

ಹೆಣ್ಣು ಮಕ್ಕಳಿಗೆ ಮನೆಯ ಪರಿಸ್ಥಿತಿಯು ಸುರಕ್ಷಿತವಾಗಿಲ್ಲ, ಯಾರು ಯಾವ ಗಳಿಗೆಯಲ್ಲಿ ಸಂಬಂಧವನ್ನೆ ಲೆಕ್ಕಿಕ್ಕರಿಸದೆ ಲೈಂಗಿಕ ಅತ್ಯಾಚಾರವೆಸಗುತ್ತಾರೆಂದು ಹೇಳಲು ಸಾಧ್ಯವಿಲ್ಲ. . ಬಾಲ ವೇಶ್ಯಾವೃತ್ತಿಯು ನಮ್ಮ ಸಮಾಜದ ಕಳಂಕ, ಯಾವ ದೇಶದಲ್ಲಿ ಮಕ್ಕಳನ್ನು ದೇಶದ ಭವಿಷ್ಯವೆಂದು, ದೇವರ ಸಮಾನವೆಂದು ಪರಿಗಣಿಸುತ್ತಾರೊ ಅಂತಹ ದೇಶದಲ್ಲಿ ಬಾಲ ವೇಶ್ಯಾವೃತ್ತಿ ಇರುವುದು ಎಂಥಾ ವಿಪರ್ಯಾಸ! 2,000 ವರ್ಷಕ್ಕೆ ಭಾರತದಲ್ಲಷ್ಟೆ ಅಲ್ಲ, ಇಡೀ ವಿಶ್ವದಲ್ಲೇ ಬಾಲ ವೇಶ್ಯಾವೃತ್ತಿ ಭಯಂಕರ ರೂಪ ತಾಳಬಹುದು. ●

ಕೆ.ಪಿ.ಎಸ್. ಗಿಲ್ ಅವರಿಗೆ ಶಿಕ್ಷೆ ಖಾಯಂ

1998 ಜುಲೈ 18ರಂದು ಅಂದಿನ ಆರ್ಥಿಕ ಇಲಾಖೆಯ ಆಯುಕ್ತರಾದ ಎಸ್. ಎಲ್. ಕಪೂರ್ ಅವರ ನಿವಾಸದಲ್ಲಿ ನಡೆದ ಅಧಿಕೃತ ಪಾರ್ಟಿಯಲ್ಲಿ ಐ.ಎ.ಎಸ್. ಅಧಿಕಾರಿ ಶ್ರೀಮತಿ ರೂಪನ್ ಡಿಯೋಲ್‌ರೊಂದಿಗೆ ಅಸಭ್ಯವಾಗಿ ವರ್ತಿಸಿದರೆಂಬ ಕಾರಣಕ್ಕೆ ಮಾಜಿ ಪೋಲಿಸ್ ಮಹಾನಿರ್ದೇಶಕ ಕೆ.ಪಿ.ಎಸ್. ಗಿಲ್ ಅವರಿಗೆ ಚಂಡೀಗಢ ನ್ಯಾಯಾಲಯ ಶಿಕ್ಷೆ.

2 ಲಕ್ಷ ರೂ. ಪರಿಹಾರದ ಜೊತೆಗೆ 50 ಸಾವಿರ ರೂ.ವನ್ನು ಪ್ರಕರಣದ ವೆಚ್ಚವೆಂದು ಸಂದಾಯ ಮಾಡಬೇಕೆಂದು ತೀರ್ಪು ನೀಡಲಾಗಿದೆ. ಅಲ್ಲದೆ ಸಾರ್ವಜನಿಕ ಸಮಾರಂಭಗಳಲ್ಲಿ ಮಧ್ಯಪಾನ ಮಾಡಕೂಡದೆಂದು, ಮೂರು ವರ್ಷ ಶಿಕ್ಷಾರ್ಥ ಅವಧಿಯನ್ನು ಪೂರ್ಣಗೊಳಿಸಬೇಕೆಂದು ಆ ಅವಧಿಯಲ್ಲಿ ಹಿರಿಯ ಅಧಿಕಾರಿಯೊಬ್ಬರು ಅವರ ವರ್ತನೆಯ ಮೇಲೆ ನಿಗಾ ವಹಿಸಬೇಕೆಂದು ತೀರ್ಪಿನಲ್ಲಿ ತಿಳಿಸಲಾಗಿದೆ. ಸೆಷನ್ ಕೋರ್ಟ್ ವಿಧಿಸಿದ್ದ ತೀರ್ಪನ್ನು ಜಿಲ್ಲಾ ನ್ಯಾಯಾಲಯ (ಚಂಡೀಗಢ)ದ ನ್ಯಾಯಾಧೀಶರಾದ ಶ್ರೀ ಅಮರ್‌ದತ್ತ ಅವರು ಖಾಯಂಗೊಳಿಸಿದರು.

ತೀರ್ಪಿಗೆ ಪ್ರತಿಕ್ರಿಯಿಸುತ್ತಾ ಶ್ರೀಮತಿ ರೂಪನ್ ಡಿಯೋಲ್ ಅವರು "ನಾನು ಪರಿಹಾರ ಧನವನ್ನು ತೆಗೆದುಕೊಳ್ಳುವುದಿಲ್ಲ ಕಾರಣ ಗೌರವಕ್ಕಾಗಿ ನಾನು ಹೋರಾಡಿದ್ದೆ ಹೊರತು ಹಣದ ಲಾಭಕ್ಕಾಗಿ ಅಲ್ಲ" ಎಂದು ಹೇಳಿದ್ದಾರೆ. ಅವರ ಪತಿ ಶ್ರೀ ಬಜಾಜ್ ಅವರು ಈ ತೀರ್ಪು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಅನೇಕ ಮಹಿಳೆಯರಿಗೆ ಆಶಾದಾಯಕ ವಿಶಯವೆಂದು ಹೇಳಿದ್ದಾರೆ. ಹಿಂದೊಮ್ಮೆ ಪ್ರಕರಣಕ್ಕೆ ಸಂಬಂಧಿಸಿದಂತೆ, ದೇಶದಲ್ಲಿ ಹೊತ್ತಿ ಉರಿಯುವ ಸಮಸ್ಯೆಗಳಿರುವಾಗ ಈ ವಿಷಯಗಳಿಗೆ ಪ್ರತಿಕ್ರಿಯಿಸುವುದು ಮುಖ್ಯವಲ್ಲವೆಂದು ಗಿಲ್ ಹೇಳಿದ್ದರು. ಈಗ ವಿಶಯ ಮುಖ್ಯವಾಗಿ ಅವರಿಗೆ ಹೊತ್ತಿ ಉರಿಯುವಂತಾಗಿರಬೇಕು.

ಪಿತೃ ಪ್ರಧಾನತೆಯೊಳಗಿನ ಮಹಿಳೆಯರಿಗೆ ಆಯ್ಕೆ ಎಂಬುದು ಒಂದು ಮರೀಚಿಕೆ

ಬದುಕುವ ಮಾರ್ಗಗಳು ಅನೇಕ, ಅದರಲ್ಲಿ ವೇಶ್ಯಾವೃತ್ತಿಯು ಒಂದು. ಬದುಕಲು ಇರುವ ಇತರ ವೃತ್ತಿಗಳ ಹಾಗೆ ಇದೂ ಒಂದು. ಸಾಮಾನ್ಯ ನಂಬಿಕೆ ಇರುವಂತೆ ಪುರುಷನ ಅನುಕೂಲಕ್ಕೆ ಸೃಷ್ಟಿಯಾದ ವೃತ್ತಿ ಇದಲ್ಲ, ಬದಲಾಗಿ ಪ್ರಾಥಮಿಕವಾಗಿ ಮಹಿಳೆಯರೇ ಇದರಲ್ಲಿ ಬದುಕುತ್ತಾರೆ. ವೇಶ್ಯಾವೃತ್ತಿಯಲ್ಲಿರುವ ಹೆಂಗಸು ಸೆಕ್ಸ್ ಮೂಲಕ ಹಣ ಗಳಿಸುತ್ತಾಳೆ ಮತ್ತೂ ನಮ್ಮ ಕುಟುಂಬಗಳಿಗೆ ಅನ್ನ ಸಂಪಾದಿಸುವವರು ನಾವೇ.

ವೇಶ್ಯಾವೃತ್ತಿ ಒಂದು ಕಸುಬು ಎನ್ನುವ ಹೇಳಿಕೆಯನ್ನು ನಾವು ಅಲ್ಲಗಳೆಯುತ್ತೇವೆ. ನಾವು ಕಸುಬು ಹಾಗೂ ಉದ್ಯೋಗ/ ವ್ಯಾಪಾರವನ್ನು ಬೇರೆ ಬೇರೆಯಾಗಿ ಪರಿಗಣಿಸುತ್ತೇವೆ. ಉದಾಹರಣೆಗೆ ಈಗ ನಾವು ಸೆಕ್ಸ್ ಮೂಲಕ ಹಣ ಗಳಿಸುವುದನ್ನು ಉದ್ಯೋಗವಾಗಿರಿಸಿಕೊಂಡಿದ್ದರೆ ಅದು ನಮ್ಮ ಅಲ್ಪಾವಧಿಯ ಉದ್ಯೋಗ ಅಷ್ಟೆ. ವ್ಯಾಪಾರದ ಸ್ವರೂಪವೇ ಅಲ್ಪಕಾಲದ್ದು. ಆದುದರಿಂದ, ಕಸುಬು ಎಂಬ ಪದವನ್ನು ಉಪಯೋಗಿಸುವುದರ ಮೂಲಕ ನಮ್ಮನ್ನು ಅಜೀವ ಪರ್ಯಂತ ಒಂದು ಗುಂಪಿಗೆ/ ವರ್ಗಕ್ಕೆ ತಳ್ಳಲಾಗುತ್ತಿದೆ. ನಾವು ನಮ್ಮ ಜೀವಮಾನದಲ್ಲಿ ಕಡಿಮೆ ಮತ್ತು ನಿರ್ದಿಷ್ಟ ಕಾಲದವರೆಗೆ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯರು. ಸೆಕ್ಸ್ ಮೂಲಕ ಹಣ ಗಳಿಸದೆ ಇರುವಾಗ ಆದಾಯ ತರುವ ಇನ್ನಿತರ ಚಟುವಟಿಕೆಗಳಲ್ಲಿ ನಾವು ತೊಡಗಿರುತ್ತೇವೆಂಬುದನ್ನು ದಯವಿಟ್ಟು ನೆನಪಿಟ್ಟುಕೊಳ್ಳಿ.

ಮಹಿಳೆಯರಿಗೆ ನಿರ್ಧಿಷ್ಟ ಪಡಿಸಲಾಗಿರುವ ಎಲ್ಲಾ ಉದ್ಯೋಗಗಳು ತಥಾಕಥಿತ ಮಹಿಳಾ ಪರ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತವೆ ಎನ್ನುವುದು ನಮ್ಮ ನಂಬಿಕೆ. ನಾವು ಗೃಹಿಣಿ, ಟೈಪಿಸ್ಟ್, ನರ್ಸ್, ಟೀಚರ್ಸ್, ಕಛೇರಿ ಸಹಾಯಕರು, ಸ್ವಾಗತಗಾರ್ತಿಯರು ಅಥವಾ ವೇಶ್ಯಾವೃತ್ತಿಯಲ್ಲಿರುವವರು ಯಾರೇ ಆಗಿರಲಿ ಸಹನೆ, ಕರುಣೆ, ದಯೆ, ಸಹಿಷ್ಣುತೆ, ತಿಳುವಳಿಕೆ, ಸಮಾಧಾನ, ಕಷ್ಟ ಸಹಿಷ್ಣುತೆ ಮತ್ತು ಇನ್ನೂ ಇತರೆ ಗುಣಗಳನ್ನು ಆರೋಪಿಸಿದ ಬಳಿಕ ನಮ್ಮನ್ನು ಬಂಡವಾಳವಾಗಿಸಿ ಕೊಳ್ಳಲಾಗುತ್ತದೆ. ಇಂಥ ಉದ್ಯೋಗಗಳೇ ಏಕೈಕ ಪರ್ಯಾಯ ವೆಂದು ಒಪ್ಪಿಸುವ ರೀತಿಯಲ್ಲಿ ಬಾಲಕಿಯರನ್ನು ಸಮಾಜೀಕರಣ ಗೊಳಿಸುವುದು, ದುಡಿಯುವ ಮಹಿಳೆಯರಲ್ಲಿ ಲೈಂಗಿಕ ಭೇದಭಾವವನ್ನು ಹುಟ್ಟು ಹಾಕುವ ಮುಖ್ಯ ಕಾರಣವೆಂದು ನಾವು ನಂಬಿದ್ದೇವೆ. ವೇಶ್ಯಾವೃತ್ತಿಯಲ್ಲಿರುವ ಹೆಂಗಸರು ಇದಕ್ಕಿಂತ ಭಿನ್ನರಲ್ಲವೆಂಬುದೇ ನಮ್ಮ ನಂಬಿಕೆ.

ಪುರುಷ ಪ್ರಧಾನವಾದ ಪಿತೃವ್ಯವಸ್ಥೆಯಲ್ಲಿನ ಬಹುತೇಕ ಮಹಿಳೆಯರಿಗಿಂತ ನಾವು ಹೆಚ್ಚು ಶಕ್ತರು. ಉದಾಹರಣೆಗೆ ಅತ್ಯಂತ ಶೋಷಕ ಕೌಟುಂಬಿಕ ವ್ಯವಸ್ಥೆಯಲ್ಲಿ ನಾವು ಸಂಪಾದನೆ ಮಾಡುವವರು ಮತ್ತು ಮನೆ ಯಜಮಾನಿಯರೂ ಆಗಿದ್ದೇವೆ. ನಮ್ಮ ಕುಟುಂಬಗಳಲ್ಲಿನ ಗಂಡಸರ ಜೊತೆ ನಾವು ಹೊಂದಿರುವ ಸಂಬಂಧವು ಹೆಚ್ಚು ಪ್ರಾಮಾಣಿಕವಾದುದು ಮತ್ತು ಸಮಾನತೆಯುಳ್ಳದ್ದು ಯಾಕೆಂದರೆ ನಮ್ಮಲ್ಲಿ ಇಬ್ಬಂದಿ ನಡವಳಿಕೆಯ ಘೋಷಾದ ಅವಶ್ಯಕತೆಯೇ ಇರುವುದಿಲ್ಲ.

ಪುರುಷರಿಂದ ನಾವು ಪಡೆದಿರುವ ಆರ್ಥಿಕ ಸ್ವಾತಂತ್ರ್ಯ ನೈಜವಾದದ್ದು, ಇದನ್ನು ನಾವು ಗೌರವ ಮತ್ತು ಅಭಿಮಾನದಿಂದ ಅನುಭವಿಸುತ್ತೇವೆ. ವೇಶ್ಯಾವಾಟಿಕೆ ಮಾಲೀಕರು, ಗೂಂಡಾಗಳು, ಪೋಲೀಸರು ಮತ್ತು ಸಮಾಜದಲ್ಲಿ ನೈತಿಕತೆಯ ಸ್ಥಾಪನೆಗಾಗಿ ಹೋರಾಡುವ ಗುತ್ತಿಗೆದಾರರು ನಮಗೆ ಕಿರುಕುಳ ಕೊಡುತ್ತಾರೆ, ನಮ್ಮ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತಾರೆ, ನಮ್ಮ ಉತ್ಸಾಹವನ್ನು ಕುಗ್ಗಿಸಲು ಪ್ರಯತ್ನಿಸುತ್ತಾರೆ.

ವೇಶ್ಯಾವೃತ್ತಿಯನ್ನು ಅಪರಾಧೀಕರಣಗೊಳಿಸುವಲ್ಲಿ ನಿರ್ಬಂಧ ಕಾರ್ಯಗಳು ತಮ್ಮದೇ ಆದ ಹಿತಾಸಕ್ತಿಗಳನ್ನು ಹೊಂದಿದೆ. ವೇಶ್ಯಾವೃತ್ತಿಯನ್ನು ಅಪರಾಧೀಕರಣದ ಸಂಕೋಲೆಯಿಂದ ಬಿಡುಗಡೆಗೊಳಿಸಬೇಕೆಂಬುದು ನಮ್ಮ ಬೇಡಿಕೆಯಾಗಿದೆ. ಆಗ ನಾವು ಸುರಕ್ಷಿತವಾಗಿ ಬದುಕಬಹುದು. ಕಳಂಕ ಇಲ್ಲದೆ ಸೆಕ್ಸ್ ಮೂಲಕ ಹಣ ಮಾಡುವ ದಾರಿಯಲ್ಲಿ ಮುಂದುವರಿಯುವುದನ್ನು ಆಯ್ಕೆ ಮಾಡಿಕೊಳ್ಳಬಹುದು. ವೇಶ್ಯಾವೃತ್ತಿ ಅಪರಾಧೀಕರಣಗೊಳಿಸುವ ಹಾಗೂ ಶೋಷಿಸುವ ಎಲ್ಲಾ ಕಾಯ್ದೆಗಳನ್ನು ನಿವಾರಣೆ ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ.

ದೈಹಿಕ ಶ್ರಮ ಅಥವಾ ಭೌತಿಕ ಶ್ರಮ ಬಳಸಿ ಹಣ ಮಾಡುವುದಕ್ಕಿಂತ, ದೇಹದ ಯಾವುದೇ ಒಂದು ಭಾಗವನ್ನು ಸೆಕ್ಸ್ ಮೂಲಕ ಮಾರಾಟ ಮಾಡಿ ಹಣ ಗಳಿಸುವುದು

ವಿಭಿನ್ನವೇನಲ್ಲ. ಇತರ ಸಾಂಪ್ರದಾಯಕ ವೃತ್ತಿಗಳಿಗಿಂತ ನಮ್ಮ ವೃತ್ತಿಯು ಕಡಿಮೆ ಗೌರವಾರ್ಹ ಎಂದು ಪರಿಗಣಿಸುವ ಸಮಾಜವನ್ನು ನಾವು ವಿರೋಧಿಸುತ್ತೇವೆ. ನಮ್ಮ ಮಹಿಳಾವಸ್ಥೆಯನ್ನು ಬಳಸಿಕೊಂಡು ನಾವು ಬದಲಾವಣೆ ಹಾಗೂ ವ್ಯವಸ್ಥೆಯ ಶಕ್ತಿಯನ್ನು ಭೂಗತ ಮಾಡುವೆವೆಂಬ ನಂಬಿಕೆ ನಮಗಿದೆ. ನಮ್ಮ ಲೈಂಗಿಕತೆಯು ಅಧಿಕಾರ ಹಾಗೂ ಆದಾಯದ ಒಂದು ಮೂಲ.

ಲೈಂಗಿಕ ಕರಾರುಗಳಿಗೆ ಜಾಹೀರಾತಿನ ಮೂಲಕ, ವಿವಾಹಿತ ಸಂಗಾತಿಗಳ ನಡುವೆ ಉಡುಗೊರೆ ನೆಪದಲ್ಲಿ ನಡೆಯುವ ವರದಕ್ಷಿಣೆ ವ್ಯಾಪಾರದ ಮೂಲಕ ಸಮ್ಮತಿ ನೀಡುವ ಮೌಲ್ಯ ವ್ಯವಸ್ಥೆ, ಕಾನೂನೇ ಲೈಂಗಿಕ ಆಸೆಗಳ ವ್ಯಕ್ತಪಡಿಸುವಿಕೆಯನ್ನು ಅಸಭ್ಯವೆಂದು ಪರಿಗಣಿಸುತ್ತವೆ. ಆ ಕಾನೂನು, ಮೌಲ್ಯವನ್ನು ನಾವು ವಿರೋಧಿಸುತ್ತೇವೆ.

ದಿನನಿತ್ಯದ ಬದುಕಿನಲ್ಲಿ ಹಿಂಸೆಗೊಳಗಾಗುವ ನಮ್ಮಂತ ಹವರು ಹೆಚ್ಚಿನ ಹಿಂಸೆಯ ಮೂಲಕ ನಮ್ಮ ಬದುಕಿನ ಶೈಲಿಯನ್ನು ನಿಯಂತ್ರಿಸುವ, ದಬ್ಬಾಳಿಕೆ ನಡೆಸುವ ಸಮಾಜ ದಿಂದಾಗಿ ಹೆಚ್ಚಿನ ದಂಡನೆಗೊಳಗಾಗುತ್ತಿದ್ದೇವೆ. ವೇಶ್ಯಾವೃತ್ತಿ ಯಲ್ಲಿರುವ ಹೆಂಗಸರಾಗಿ ನಾವು, ನಮ್ಮ ಮೇಲೆ ನಿರ್ಣಾಯಕ ಧೋರಣೆಯ ಹಿಂಸೆಯನ್ನು ಹೇರುವ ಸಮಾಜವನ್ನು ವಿರೋಧಿಸುತ್ತೇವೆ.

ಲಾಲನೆ, ಪಾಲನೆ, ಮನೆಗೆಲಸ ಮತ್ತು ಇತರ ವೈವಿಧ್ಯ ಕೌಶಲ್ಯಗಳಂತೆ ಮಹಿಳೆಯ ಲೈಂಗಿಕತೆಯು ಹೆಣ್ಣಾಗಿ ಆಕೆಯ ವ್ಯಕ್ತಿತ್ವದ ಅವಿಭಾಜ್ಯ ಅಂಗವೆಂದೇ ನಾವು ನಂಬುತ್ತೇವೆ. ಕಾಮಕ್ಕೆ ಪವಿತ್ರ ಸ್ಥಾನವಿದೆಯೆಂಬುದನ್ನು ನಾವು ನಂಬುವುದಿಲ್ಲ. ಸಂತಾನಾಭಿವೃದ್ಧಿ ಉದ್ದೇಶವಲ್ಲದೆ ಬೇರೆ ಕಾರಣಕ್ಕಾಗಿ ಕಾಮವನ್ನು ಬಯಸುವ ಹೆಂಗಸರು ಆ ಸ್ಥಾನವನ್ನು ವಿರೋಧಿಸುತ್ತಾರೆಂದು ನಾವು ನಂಬುವುದಿಲ್ಲ ಅಥವಾ ಹಣಕ್ಕಾಗಿ ವ್ಯವಹಾರ ನಡೆಸುವ ಆಯ್ಕೆ ಮಾಡಿಕೊಳ್ಳುವುದನ್ನು ಅನೈತಿಕವೆಂದಾಗಲಿ, ವ್ಯಭಿಚಾರವೆಂದಾಗಲಿ ನಾವು ಪರಿಗಣಿಸು ವುದಿಲ್ಲ.

ಬಾಲವೇಶ್ಯಾವಾಟಿಕೆಯು, ಮಕ್ಕಳ ಮೇಲೆ ನಡೆಯುವ ಲೈಂಗಿಕ ಹಿಂಸೆ, ಕಿರುಕುಳ, ಬಾಲದುಡಿಮೆಗೆ ಸಮನಾದುದು. ಇವೆಲ್ಲವೂ ಮಹಿಳೆಯರ ಮೇಲಿನ ಹಿಂಸೆ, ಅತ್ಯಾಚಾರ, ಅಪಹರಣ, ಕಾರ್ಯಗಳಿಂದ ತುಳುಕುತ್ತಿರುವ ಸಮಾಜದಲ್ಲಿದೆ ಎಂಬುದನ್ನು ನಾವು ನಂಬುತ್ತೇವೆ. ಬಡ, ನಿಶ್ಯಕ್ತ, ಕಡೆಗಣಿಸಲ್ಪಟ್ಟ ಸಮುದಾಯಗಳಂತೆಯೇ ನಾವು ಸಹ ನಮ್ಮ ಬದುಕಿನ, ಭವಿಷ್ಯದ ಮೇಲೆ ತಕ್ಕ ಹಿಡಿತವನ್ನು ಹೊಂದಲಾಗಿಲ್ಲ. ಮೂರನೇ ಜಗತ್ತಿನ ಮಹಿಳೆಯರ ಅನುಭವವನ್ನ ನಾವು ಅನುಭವಿಸುತ್ತೇವೆ.

ಪ್ರೌಢರ ವೇಶ್ಯಾವಾಟಿಕೆಗೂ ಟ್ರಾಫಿಕ್ಕಿಂಗ್‌ನಂತಹ ಅಪರಾಧದ ವಿಶಯಕ್ಕೂ ವ್ಯತ್ಯಾಸವಿದೆಯೆಂದು ನಾವು ತಿಳಿದಿದ್ದೇವೆ. ಬಂಡವಾಳಶಾಹಿ ಪಿತೃಪ್ರಧಾನತೆಯೊಳಗಿನ ಮಹಿಳೆಯರಿಗೆ 'ಆಯ್ಕೆ' ಎಂಬುದು ಒಂದು ಕ್ರೂರ ಮರೀಚಿಕೆ ಎಂಬುದನ್ನು ನಾವು ಒಪ್ಪಿಕೊಳ್ಳುವ ಜೊತೆಗೆ ವೇಶ್ಯಾವೃತ್ತಿ ಬಂದು ಆಯ್ಕೆಯಾಗಿಯೂ ಇದೆ ಎಂದು ಒಪ್ಪಿಕೊಳ್ಳುವ ಅಗತ್ಯವಿದೆ ಯೆಂದು ನಾವು ಭಾವಿಸುತ್ತೇವೆ. ಅಲ್ಲದೆ ಅನೇಕ ಕಾರಣಗಳಿಗಾಗಿ ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರು ಅದೇ ವೃತ್ತಿಯಲ್ಲಿ ಮುಂದುವರೆಯುವ ಆಯ್ಕೆ ಮಾಡಿಕೊಂಡಿರುವುದನ್ನೂ ನಾವು ಒಪ್ಪಿಕೊಳ್ಳುತ್ತೇವೆ. ಇಚ್ಛೆ ಇಲ್ಲದೆಯೂ ವೇಶ್ಯಾವೃತ್ತಿಗೆ ಬಂದರೂ, ವೇಶ್ಯಾವೃತ್ತಿಯೊಳಗಿರುವ ಸಾಮಾಜಿಕಿಕರಣವು ಉದಾಸೀನತೆ ಇಲ್ಲದೆಯೂ ಸಕ್ರೀಯವಾಗಿ ವೃತ್ತಿಯನ್ನು ಒಪ್ಪಿಕೊಳ್ಳುವಂತಹ ಬದಲಾವಣೆಯನ್ನು ತರುತ್ತದೆ. ಇದು ಬಲಾತ್ಕಾರದ ಪ್ರಕ್ರಿಯೆ ಏನಲ್ಲ. ಬಂಡವಾಳಶಾಹಿ ಪಿತೃಪ್ರಧಾನ ಸಮಾಜದಲ್ಲಿ ಬದುಕುತ್ತಿದ್ದರೂ ಪಿತೃಪ್ರಧಾನ ವ್ಯವಸ್ಥೆಯಾಚೆಗಿನ ಸ್ವಾತಂತ್ರ್ಯದ ಅನುಭವದಿಂದಾಗಿ ನಮಗೆ ಆ ಅಸಮಾನ, ಪಕ್ಷಪಾತ ಮೌಲ್ಯ ವ್ಯವಸ್ಥೆಯಿರುವ, ಕಪಟ (double std) ಸಮಾಜಕ್ಕೆ ಪ್ರವೇಶಿಸುವುದು ನಮಗೆ ದುಸ್ಸಾಧ್ಯ.

ಸಮಾಜದ ರೀತಿ, ರಿವಾಜು, ನಿಯಮ ಮತ್ತು ಅಧಿಕಾರ ವನ್ನು ನಾವು ಒಪ್ಪಿಕೊಳ್ಳುವುದಿಲ್ಲವೆಂಬ ಉದ್ದೇಶಕ್ಕಾಗಿಯೇ ನಮ್ಮನ್ನು ಅನೈತಿಕ, ಕಾನೂನುಬಾಹಿರ ಎಂದು ಪರಿಗಣಿಸುವುದನ್ನು ನಾವು ವಿರೋಧಿಸುತ್ತೇವೆ. ನಮ್ಮ ಬದುಕಿನ ಗೌರವದ ಹಕ್ಕನ್ನ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು, ನ್ಯಾಯ, ಭದ್ರತೆ, ಸ್ವಾತಂತ್ರ್ಯದ ಹಕ್ಕನ್ನು ಕಡೆಗಣಿಸುವ ಸಮಾಜದ ಮುಖ್ಯವಾಹಿನಿಯ ವಿವಿಧ ಶಕ್ತಿಗಳನ್ನು ನಾವು ವಿರೋಧಿಸುತ್ತೇವೆ.

ಮಹಿಳೆ ಮತ್ತು ಆಕೆಯ ಲೈಂಗಿಕತೆಯನ್ನು ವ್ಯಾಪಾರೀ ಕರಣಗೊಳಿಸುವುದನ್ನು, ಸರಕಾಗಿಸುವುದನ್ನು ಪ್ರೋತ್ಸಾಹಿಸುವ ಸಮಾಜವನ್ನು ನಾವು ವಿರೋಧಿಸುತ್ತೇವೆ. ನಮ್ಮ ಲೈಂಗಿಕತೆಯನ್ನು

23ನೇ ಪುಟಕ್ಕೆ ಮುಂದುವರಿದಿದೆ

"ಮಾಧವಿ"ಯ ಮೂಕವೇದನೆ

ಮುಗ್ಧ ಜನರ ಮೇಲೆ ದಬ್ಬಾಳಿಕೆ, ಠಾಣೆಯಲ್ಲೇ ವಿಚಾರಣಾಧೀನ ಕೈದಿಗಳ ಸಾವು, ಮುಗ್ಧ, ದಲಿತ, ಅಸಹಾಯಕ ಹೆಂಗಸರಿಗೆ ಕಿರುಕುಳ, ಅತ್ಯಾಚಾರ, ಬೆದರಿಕೆ ಒಡ್ಡುವುದು, ನಕ್ಸಲೀಯರನ್ನು ಮಟ್ಟ ಹಾಕುವ ಉತ್ಸಾಹದಲ್ಲಿ ನಕ್ಸಲೀಯರಲ್ಲದವರನ್ನೂ ಸಂಶಯಿಸುವುದು ವಿನಾಕಾರಣ ಠಾಣೆಗೆ ಕರೆಸಿ ಬೆದರಿಸುವುದು ಮುಂತಾದ್ದಕ್ಕೆ ಈಗಾಗಲೇ ಆಂಧ್ರ ಪೋಲೀಸರು ಸಾಕಷ್ಟು ಕುಖ್ಯಾತರಾಗಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಇಂಥ ಪೋಲಿಸ್ ದೌರ್ಜನ್ಯ ಪ್ರಕರಣಗಳು ಸುಮಾರು ನಲವತ್ತೆಂಟು ಸಾವಿರದಷ್ಟು ದಾಖಲಾಗಿವೆ ಎಂದರೆ ಊಹಿಸಿಕೊಳ್ಳಿ, ನ್ಯಾಯಾಂಗ, ಕಾರ್ಯಾಂಗಗಳನ್ನು ಕಡೆಗಣಿಸಿ ಪೋಲಿಸರು ಎಲ್ಲೆಂದರಲ್ಲಿ, ಯಾರೆಂದರವರ ಮೇಲೆ ಮನಸ್ಸಿಗೆ ಬಂದಂತೆ ಕೇಸು ಹಾಕುವುದು, ಕ್ರಮ ಜರುಗಿಸುವುದು ಮಾಡುತ್ತಿದ್ದಾರೆ.

ಕಳೆದ ಮೇ ತಿಂಗಳಲ್ಲಿ ಆಂಧ್ರ ಪೋಲಿಸರ ವಿಶೇಷ ಪಡೆಯವರು ನಾಲ್ಕು ಜನ ಹೆಂಗಸರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಅದೂ ಸರ್ಕಾರಿ ಜೀಪಿನಲ್ಲಿ ಇವರನ್ನು ಅಪಹರಿಸಿ ಈ ಕೃತ್ಯ ಎಸಗಿದ್ದಾರೆ. ಮಾರ್ಚ್ ತಿಂಗಳಲ್ಲಿ ಮೇದಕ್ ಜಿಲ್ಲೆಯ ಇಬ್ರಾಹಿಂಪುರದಲ್ಲಿ ಮೂರು ಜನ ದಲಿತ ಹೆಂಗಸರನ್ನು ಬೆತ್ತಲೆಗೊಳಿಸಿ, ನಕ್ಸಲೀಯರೊಬ್ಬರ ಬಗ್ಗೆ ಮಾಹಿತಿ ನೀಡುವಂತೆ ಒತ್ತಾಯಿಸಿ ಅವರನ್ನು ಮನಬಂದಂತೆ ಹೊಡೆದಿದ್ದಾರೆ. ಇಂಥ ಪಾಶವೀ ಕೃತ್ಯಗಳು ಆಂಧ್ರದಲ್ಲಿ ಸರ್ವೇ ಸಾಮಾನ್ಯವಾಗಿದೆ. ಒಂದು ವರದಿಯ ಪ್ರಕಾರ ಇಪ್ಪತ್ತೈದು ಜನ ಪೋಲಿಸರನ್ನು ಕಿರುಕುಳ, ಹಲ್ಲೆ, ಅತ್ಯಾಚಾರ, ಅಧಿಕಾರ, ದುರುಪಯೋಗದ ಆರೋಪದ ಮೇಲೆ ರಾಜ್ಯದ ವಿವಿಧೆಡೆಗಳಲ್ಲಿ ಅಮಾನತು ಮಾಡಲಾಗಿದೆ. ಹೆಂಗಸರ ರಕ್ಷಣೆಗಾಗಿ ಮಾಡಿರುವ ಯಾವ ಕಾನೂನುಗಳೂ ಇಲ್ಲಿ ಸರಿಯಾಗಿ ಜಾರಿಯಾಗುತ್ತಿಲ್ಲ.

ಇವರ ದಬ್ಬಾಳಿಕೆಗೆ ಸಾಕ್ಷಿಯಾಗಿ ಮಹಬೂಬ್ ನಗರದಲ್ಲಿ ಇಂಥದೇ ಮತ್ತೊಂದು ರಾಕ್ಷಸೀ ಕೃತ್ಯ ನಡೆದಿದೆ. 17 ವರ್ಷದ ಮಾಧವಿ ಎಂಬ ಅಮಾಯಕ ಹೆಣ್ಣೊಬ್ಬಳ ಮೇಲೆ 'ನಕ್ಸಲೀಯ"ಳು ಎಂಬ ಆರೋಪ ಹೊರಿಸಿ, ಆಕೆಯ ಮನೆಗೆ ನುಗ್ಗಿ, ಮನೆಯವರನ್ನೆಲ್ಲಾ ಥಳಿಸಿ, ಆಕೆಯನ್ನು ದಸ್ತಗಿರಿ ಮಾಡಿದ್ದಾರೆ. ಇಷ್ಟೇ ಅಲ್ಲದೆ, ಆಕೆಯ ಮನೆಯಲ್ಲಿ ನಕ್ಸಲೀಯರಿಗೆ ಸಂಬಂಧಪಟ್ಟ 'ಸಾಹಿತ್ಯ" ದೊರೆಯಿತೆಂದು ಆಕೆಗೆ ವಿಧವಿಧವಾಗಿ ಹಿಂಸಿಸಿದ್ದಾರೆ. ನವೆಂಬರ್ 16ರಂದು ಆಕೆಯ ಮನೆಗೆ ನುಗ್ಗಿ, ಎಳೆದೊಯ್ದು ಆಕೆ 'ಪೀಪಲ್ಸ್ ವಾರ್ ಗ್ರೂಪ್"ನ 'ಸಂಧ್ಯಾ" ಎಂದು ಸಲ್ಲದ ಅಪವಾದ ಮಾಡಿ ಆಕೆಗೆ "ಎಲೆಕ್ಟ್ರಿಕ್ ಶಾಕ್" ನೀಡಿ, ಹಿಂಸಿಸಿ, ಖಾಲಿ ಹಾಳೆ"ಯ ಮೇಲೆ ಸಹಿ ಹಾಕುವಂತೆ ಒತ್ತಾಯಿಸಿದ್ದಾರೆ. ಆಕೆಯ ಮೇಲೆ ಸರ್ಕಾರದ ವಿರುದ್ಧ ಸಂಚು ಹಾಗೂ ಸಾರ್ವಜನಿಕ ಜೀವನದ ಭದ್ರತೆಗೆ ಭಂಗ ತಂದ ಎರಡು ಪ್ರಕರಣಗಳನ್ನು ಆ ತಕ್ಷಣವೇ ದಾಖಲು ಮಾಡಿದ್ದಾರೆ. ಭಯೋತ್ಪಾದಕರು, ದೇಶದ್ರೋಹಿಗಳ ಮೇಲೆ ಹಾಕುವ ಕೇಸನ್ನು ಈಕೆಯ ಮೇಲೆ ದಾಖಲು ಮಾಡಿಕೊಂಡು ಅನ್ಯಾಯವಾಗಿ ಈ ಮುಗ್ಧೆಯನ್ನು ಕಂಗೆಡಿಸಿದ್ದಾರೆ.

ಪ್ರಖ್ಯಾತ ತೆಲುಗು ಬರಹಗಾರ್ತಿ ರಂಗನಾಯಕಮ್ಮ, ಮಾಧವಿಯ ಮನೆಯಲ್ಲಿ ಪೋಲೀಸರಿಗೆ ಸಿಕ್ಕಿದ 'ಅರುಣತಾರ", 'ಮಹಿಳಾಮಾರ್ಗ" ಇವೆರಡೂ ಕಾನೂನಿನ ವ್ಯಾಪ್ತಿಯೊಳಗೇ ಬರುವ ಪುಸ್ತಕಗಳು, ನಿಷೇದಿತ ಪುಸ್ತಕಗಳಲ್ಲ ಎಂದು ಹೇಳಿದ್ದಾರೆ. ಈ 'ಮಾಧವಿ"ಗಾದ ಅನ್ಯಾಯವನ್ನು ಪ್ರತಿಭಟಿಸಲು ಕರೀಂನಗರ ಜಿಲ್ಲೆಯ 'ಬೋಯಿನಪಲ್ಲಿ" ಜನರು, ಆರು ಗಂಟೆಗಳಿಗಿಂತ ಹೆಚ್ಚು ಕಾಲ ರಸ್ತೆಯಲ್ಲಿ ವಾಹನಗಳನ್ನು ತಡೆದಿದ್ದಾರೆ. ಹೀಗಿದ್ದೂ ಪೋಲಿಸ್ ಪೇದೆಯೊಬ್ಬ ಮಗಳ ರಕ್ಷಣೆಗೆಂದು ಬಂದ ತಂದೆಯ ಮೇಲೆ ಹಲ್ಲೆ ಮಾಡಿದ್ದೂ ಅಲ್ಲದೆ, ಅವನ ಸಹಾಯಕ್ಕೆಂದು ಬಂದ ಇನ್ನಿಬ್ಬರ ಹೊಟ್ಟೆಗೂ ಚಾಕುವಿನಿಂದ ಇರಿದಿದ್ದಾನೆ.

ಅಲ್ಲಿನ ಅಧಿಕಾರಿಯೊಬ್ಬರ ಪ್ರಕಾರ "ಆಂಧ್ರದಲ್ಲಿ ಇಂಥ ಪ್ರಕರಣ ದಿನನಿತ್ಯ ನಡೆಯುತ್ತವೆ. ಆದರೆ ಸಾರ್ವಜನಿಕರು ಹಾಗೂ ಕೆಲವು ಮಹಿಳಾ ಸಂಘಟನೆಗಳು ಈ 'ಮಾಧವಿ ಪ್ರಕರಣ"ವನ್ನು ಗಂಭೀರವಾಗಿ ತೆಗೆದುಕೊಂಡು ಪ್ರತಿಭಟಿಸಿದ್ದರಿಂದ ಇದು ಇಷ್ಟು ಗಮನ ಸೆಳೆದಿದೆ".

ಇದೇ ರೀತಿ ಕಾಲೇಜು ಹುಡುಗಿಯರ ಮೇಲೂ ಲೈಂಗಿಕ ಕಿರುಕುಳ ನಡೆಸಲು ಯತ್ನಿಸಿದ ಕೆಲವು ದುಷ್ಕರ್ಮಿಗಳನ್ನು ಶಿಕ್ಷಿಸುವಂತೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರು ಕ್ರಮ ಕೈಗೊಂಡಿದ್ದರು. ಇನ್ನೊಂದು ಅತ್ಯಾಚಾರ ಪ್ರಕರಣದಲ್ಲಿ ಅದರಲ್ಲಿ ಶಾಮೀಲಾಗಿದ್ದರು ಎನ್ನಲಾದ ಪೋಲಿಸರನ್ನು ಅಮಾನತ್ತುಗೊಳಿಸಿದ್ದರು. ಆದರೆ ಏಕೋ ಏನೋ ಈ ಮುಗ್ಧೆಯ

'ರೋದನ''ದ ಜಿಸಿ ಅವರನ್ನು ತಟ್ಟಿಲ್ಲ. ಪೋಲೀಸರ ಭಯ ಈಕೆಗೆ ಇನ್ನೂ ಇದ್ದೇ ಇದೆ. ಬೇಲಿಯೇ ಹೊಲವನ್ನು ಮೇಯುವಂಥ ಪರಿಸ್ಥಿತಿಯಲ್ಲಿ ಯಾರು ರಕ್ಷಕರು ಇಂಥವರಿಗೆ? ಒಬ್ಬ ರಾಜಕಾರಣಿ ಹೇಳುತ್ತಾರೆ, "ರಾಜಕಾರಣಿಗಳ ಹಿಡಿತದಲ್ಲಿ ಈಗ ಪೋಲೀಸರಿಲ್ಲ, ನಾವು ಹೇಳಿದ್ದಕ್ಕೆ ಅವರು ಸೊಪ್ಪು ಹಾಕುವುದಿಲ್ಲ. ನಾವೇನು ಮಾಡುವುದು ನೀವೇ ಹೇಳಿ" ಅವರೇ ಹೇಳುವಂತೆ ಸರ್ಕಾರ ಶಿಕ್ಷಕನಂತೆ, ಜನರಿಗೆ ಮಾರ್ಗದರ್ಶನ ಮಾಡುವುದು ಅದರ ಕೆಲಸ. ಆದರೆ ಈ ಶಿಕ್ಷಕ ವೃತ್ತಿಯನ್ನು ಸರ್ಕಾರ ಸರಿಯಾಗಿ ನಿರ್ವಹಿಸದಿದ್ದರೆ, ಅದರಿಂದ ಉಂಟಾಗುವ ಅರಾಜಕತೆಗೆ ಸರ್ಕಾರವೇ ಹೊಣೆ".

ಸಾಧಾರ

ಓದುಗರ ವಿಭಾಗ

ಸೆಪ್ಟೆಂಬರ್ ತಿಂಗಳ ಮಾನಸ ಪತ್ರಿಕೆಯಲ್ಲಿ "ಸ್ತ್ರೀರೋಗ ಹಾಗೂ ಪ್ರಸೂತಿ ವೈದ್ಯರುಗಳ ಅಂತರರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಕ್ವಿನ್‌ಕ್ರೈನ್ ಮೇಲೆ ದಾಳಿ" ಲೇಖನ ತುಂಬಾ ತಿಳಿವಳಿಕೆ ನೀಡುವಂತಿತ್ತು. ಮಾನಸ ತಿಂಗಳಿಂದ ತಿಂಗಳಕ್ಕೆ ಹೊಸ-ಹೊಸ ಬಗೆಯ ವಿಷಯ ತಿಳಿಸುತ್ತಿರುವುದಕ್ಕೆ ಧನ್ಯವಾದ. ಈ ಪತ್ರಿಕೆ ತಿಂಗಳಿಂದ ತಿಂಗಳಿಗೆ ಓದಿಸಿಕೊಂಡು ಹೋಗುತ್ತಿರುವದರ ಜೊತೆಗೆ ಓದುಗರಿಗೆ ಜ್ಞಾನದ ಭಂಡಾರವೇ ಒದಗಿಸುತ್ತಿದೆ.

ಪ್ರೇಮಿಳಾ ಪ್ರಭಾಕರ
ಸಹಯೋಗಿನಿ
ಮ.ಸ.ಕ. ಬಗದಲ

* * *

ಸಂಪಾದಕೀಯ ಕ್ವಿನ್‌ಕ್ರೈನ್ ಗುಳಿಗೆಯ ಉಪಯುಕ್ತತೆಯ ಮಾಹಿತಿ ಸಮಯೋಚಿತ. ಲೈಂಗಿಕ ಕಿರುಕುಳ ಸುಪ್ರೀಂಕೋರ್ಟಿನ ಸ್ವಾಗತಾರ್ಹ ತೀರ್ಪು ಮಾಹಿತಿಯ ಸಕಾಲಿಕ ಕಥನ, ಕವನ, ಕಣ್ಣೀರು ಸುರಿಸುವ ಸನ್ನಿವೇಶದ ವರ್ಣನೆ ಉಚಿತವಾಗಿದೆ. ಮೀಸಲಾತಿ ಚರ್ಚೆ ದ. ಸಂಸ ನಿಲುವು ಸ್ವಾಗತಾರ್ಹ.

ನರಸಿಂಹಗುಪ್ತ
ಬಳಿಚಕ್ರ, ಯಾದಗಿರಿ ತಾ.,
ಕಲಬುರ್ಗಿ ಜಿಲ್ಲೆ

* * *

ಸೆಪ್ಟೆಂಬರ್ ತಿಂಗಳಿನಲ್ಲಿ ಮೂಡಿ ಬಂದ ಲೇಖನ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ, ಸುಪ್ರೀಂ ಕೋರ್ಟಿನ ಸ್ವಾಗತಾರ್ಹ ತೀರ್ಪು ತುಂಬಾ ಉಪಯುಕ್ತವಾಗಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ನಮಗೆ ನಿಮ್ಮ ಪತ್ರಿಕೆ ಮಾರ್ಗದರ್ಶಿಯಾಗಿದೆ.

ಪಂಕಜಾ, ಕೆ. ಕಲ್ಮಡ
ನಿರ್ದೇಶಕರು,
ಕಿಡ್ಸ್ ಧಾರವಾಡ

* * *

ಮಹಿಳೆಯರಿಂದ ಮಹಿಳೆಯರಿಗಾಗಿ ನಡೆಸಲ್ಪಡುತ್ತಿರುವ ಏಕೈಕ ಮಾಸಪತ್ರಿಕೆಯೆಂದರೆ "ಮಾನಸ".

ನಂದಕಿಶೋರ್ ಗೌಡರ್
ಬಡಿಗರ ಬೀದಿ, ಬೆಳಗಾಂ

"ತಾಯ್ತ್ತನ"ದ ಗುಣಗಳನ್ನು ಪುರುಷರು ಬೆಳೆಸಿಕೊಳ್ಳಲು ಸಾಧ್ಯವೆ?

ಇಬ್ಬನಿ ಜನರ ದನಿಯಲ್ಲಿ ಪ್ರಕಟವಾದ, ಸಂಬುದ್ಧದಲ್ಲಿ ಪುನರ್ ಮುದ್ರಣಗೊಂಡ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕರು (ಸಾಂಸ್ಕೃತಿಕ) ಖ್ಯಾತ ಲೇಖಕರೂ ಆದ ದೇವನೂರ ಮಹಾದೇವರವರ ಸಂದರ್ಶನದಲ್ಲಿ ದಲಿತ ಚಳುವಳಿ, ಒಟ್ಟಾರೆಯಾಗಿ ಸಮಾಜದ ಬಗ್ಗೆ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಮೆಚ್ಚುವಂತಾದ್ದಾದರೂ, ಸ್ತ್ರೀಪರ ಚಳುವಳಿಯ ಬಗ್ಗೆ ಅವರ ಕೆಲವು ಅಭಿಪ್ರಾಯಗಳು ಪ್ರಚಲಿತ ಪುರುಷ ಪ್ರಧಾನ ಆಲೋಚನೆಗಳಿಗಿಂತ ಭಿನ್ನವಾಗಿಲ್ಲ. ಮಾನಸದ ಅನಿಸಿಕೆಯನ್ನು ಇಲ್ಲಿ ಪ್ರಕಟಿಸಲಾಗಿದೆ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿನ ಬಗ್ಗೆ ಎರಡು ಅತಿರೇಕದ ಮೌಲ್ಯಗಳು ಅಸ್ತಿತ್ವದಲ್ಲಿವೆ. ಒಂದು ದೃಷ್ಟಿಕೋನದಲ್ಲಿ ಹೆಣ್ಣು ಜೀವ ನೀಡುವವಳು, ಪೊರೆಯುವವಳು, ಇನ್ನೊಂದು ದೃಷ್ಟಿಕೋನದಲ್ಲಿ ಈಕೆ ವಿನಾಶದ, ಅವನತಿಯ ವಿರೂಪದ ಪ್ರತಿರೂಪವಾಗಿದ್ದಾಳೆ. ಪುರುಷ ಪ್ರಧಾನ ಸಮಾಜದ ಒಂದು ಕಣ್ಣಿಗೆ ಈಕೆ ದೇವತೆಯಾಗಿ ಕಂಡರೆ ಇನ್ನೊಂದು ಕಣ್ಣಿಗೆ ಸೂಳೆಯಾಗಿ, ಭೋಗದ ವಸ್ತುವಾಗಿ ಕಾಣುತ್ತಾಳೆ.

ಈ ಮೇಲಿನ ಎರಡು ಪರಿಕಲ್ಪನೆಗಳು ನಮ್ಮ ದೈನಂದಿನ ಬದುಕಿನಲ್ಲಿ ಕೆಲಸ ಮಾಡುವ ವಿಧಾನಗಳನ್ನು ನಾವು ಗಮನಿಸಬೇಕಾಗುತ್ತದೆ. ಇದು ಪುರುಷನ ವ್ಯಕ್ತಿತ್ವವನ್ನು ಆರಾಧಿಸುವ, ಎತ್ತಿ ಹಿಡಿಯುವ ದೈನಂದಿನ ಬದುಕಿನಲ್ಲಿ ಅವನಿಗೆ ನೆರವಾಗುವ, ಸೇವೆ ಮಾಡುವುದರ ಜೊತೆಯಲ್ಲಿ ಸ್ತ್ರೀಯರ ಅಸ್ತಿತ್ವವನ್ನು ನಿರಾಕರಿಸುತ್ತದೆ.

ಹೆಣ್ಣನ್ನು ಭೋಗದ ವಸ್ತುವನ್ನಾಗಿಸುವ ಪರಿಕಲ್ಪನೆ ನೇರವಾದದು. ಕಣ್ಣಿಗೆ ರಾಚುವಂತಹದು. ಪ್ರತಿಭಟನೆಯ ಕಣ್ಣಿಗೆ ಗೋಚರಿಸುವಂತಹದು. ಸಂಘಟನೆಯ ದನಿಗಳನ್ನು ಒಟ್ಟುಗೂಡಿಸುವಂತಹದು. ಆದರೆ ಹೆಣ್ಣನ್ನು ವೈಭವೀಕರಿಸುವ ಸಾಂಸ್ಕೃತಿಕ ಮೌಲ್ಯಗಳು ಬಲು ನಾಜೂಕಿನವು. ಜೊತೆಗೆ ಈ ಮೌಲ್ಯಗಳನ್ನು ಮಹಿಳೆಯರೇ ಒಪ್ಪಿಕೊಂಡು ಬದುಕುವುದರಿಂದ ಗೊಂದಲಮಯವಾದವು, ಸಂಕೀರ್ಣವಾದವು.

ದೇವನೂರು ಮಹಾದೇವರ ಹಾಗೆ ಬಹಳಷ್ಟು ಪುರುಷರು ಹಾಗೂ ಮಹಿಳೆಯರು ತಾಯ್ತನದ ವೈಭವೀಕರಣ ಮಾಡುವುದು ಆಶ್ಚರ್ಯಕರವೇನಲ್ಲ. ಕುಟುಂಬದ ಚೌಕಟ್ಟಿನಿಂದ ಪ್ರಾರಂಭವಾಗುವ ತಾಯ್ತನದ ನಿರೀಕ್ಷೆ ಒಂದು ಸಮಾಜ ನಿರೀಕ್ಷೆಯು ಆಗಿದೆ. ಈ ನಿರೀಕ್ಷೆಯ ಫಲವಾಗಿ ಹೆಣ್ಣು ಜೀವ ಕೊಡುವವಳು, ಪೊರೆಯುವವಳು, ರಕ್ಷಿಸುವವಳು ಸದಾ ಕೊಡುವವಳೇ ವಿನಃ ಕೇಳುವವಳಲ್ಲ. ಸಹನೆ, ನಿಸ್ವಾರ್ಥ ಸೇವೆ, ತ್ಯಾಗ, ತಾಯ್ತನದ ಲಕ್ಷಣಗಳು, ತಾಯ್ತನದ ಸಂಪೂರ್ಣ ಅಭಿವ್ಯಕ್ತಿಯಾಗುವುದು ಮೊದಲು ಕುಟುಂಬದಲ್ಲಿ ಮಕ್ಕಳನ್ನು ಒಂಬತ್ತು ತಿಂಗಳು ಹೊತ್ತು ಹೆತ್ತು ಪಾಲಿಸಿ ಪೋಷಿಸುತ್ತಾಳೆ. ಕಾಯಿಲೆ ಬಿದ್ದ ಗಂಡನನ್ನು ಮಗುವಿನಂತೆ ಆರೈಕೆ ಮಾಡುತ್ತಾಳೆ. ತಾನು ದುಡಿಯುತ್ತಿದ್ದರೂ ದುಡಿದು ಬರುವ ಗಂಡನಿಗೆ ಬಿಸಿ ಬಿಸಿ ಊಟ ಬಡಿಸಿ ಅವನ ಊಟದ ಸಂತೃಪ್ತಿಯಲ್ಲಿ ತೇಗುತ್ತಾಳೆ. ಎಷ್ಟೋ ಬಾರಿ ತನಗೆ ಕಡಿಮೆ ಇದ್ದರೆ ಅಥವಾ ಇಲ್ಲದೇ ಇದ್ದರೂ ಉಸಿರೆತ್ತದೆ ತುಟಿಯ ನಗೆ ಬಾಡಿಸದೆ ನಿದ್ರೆ ಹೋಗುತ್ತಾಳೆ. ಮನೆಗೆ ಬರುವ ಅತಿಥಿಗಳ ಊಟೋಪಚಾರ ಕಿಂಚಿತ್ತು ಕೊಂಕು ಮೂಡಿಸದೆ ತನ್ನ ತಾಯ್ತನಕ್ಕೆ ನೀಡುವ ಮೆರಗು ಎಂದು ಭಾವಿಸುತ್ತಾಳೆ. ತಾಯ್ತನದ ನಿಸ್ವಾರ್ಥ ಸೇವೆ, ತ್ಯಾಗ, ಸಹನೆಯೇ ಇಂದಿನ ಕುಟುಂಬದ ಭದ್ರ ಬುನಾದಿ. ತಾಯ್ತನದ ವೈಭವೀಕರಣದಿಂದ ಸುಲಭವಾಗಿ, ಸರಳವಾಗಿ, ಉಚಿತವಾಗಿ ಪಡೆಯುವ ಪುರುಷ ಅದರಿಂದ ವಂಚಿತನಾಗಲು ಇಷ್ಟಪಟ್ಟಾನೆಯೆ?

ಮದುವೆಯಾದ ಹೆಂಡತಿಯಲ್ಲಿ ಹಾಗೂ ಇತರ ಹೆಣ್ಣನಲ್ಲಿ ತಾಯ್ತನ ನಿರೀಕ್ಷೆ ಮಾಡುವುದು ಬಹಳಷ್ಟು ಪುರುಷರಲ್ಲಿ ಕಂಡು ಬರುತ್ತದೆ. ಇದು ಒಂದು ರೀತಿಯಲ್ಲಿ mother fixation "ತಾಯಿ ಮಾದರಿ"ಯನ್ನು ಪುರುಷ ಪ್ರಧಾನತೆ ಹೆಣ್ಣಿನ ಮೇಲೆ ಹೇರುತ್ತದೆ.

ತಾಯ್ತನದ ಅತಿರೇಕದ ಮಾದರಿ ಕುಟುಂಬದಲ್ಲಿ ಕೆಲವು ಬಾರಿ ಹಲವು ರೀತಿಯ ಅಮಾನುಷ ಹಿಂಸೆಗಳಿಗೆ (ತಾಯಿ-ಮಗ ಸೊಸೆಯನ್ನು ಹಿಂಸಿಸುವುದು, ವರದಕ್ಷಿಣೆಯ ಸಾವು) ಕಾರಣವೆನಿಸುತ್ತದೆ.

ಸಹನೆ ಒಂದು ಗುಣಾತ್ಮಕ ಅಂಶ. ಒಂದು ಮೌಲ್ಯ ಎನ್ನುವುದು ಒಪ್ಪಬೇಕಾದುದ. ಆದರೆ ಈ ಮೌಲ್ಯವನ್ನು ನಿರಂತರವಾಗಿ ಒಬ್ಬರ ಮೇಲೆ ಹೇರುತ್ತಾ ಬರುವುದನ್ನು ಪ್ರಶ್ನಿಸಬೇಕು. ಸಹನೆ ಕೇವಲ ಹೆಣ್ಣಿಗೆ ಅನ್ವಯವಾಗುತ್ತಾ ಬಂದಿದೆ. ಸಹಿಸಿಕೊಳ್ಳುವುದೆಂದರೆ ಮೌನವಾಗಿ ಎಲ್ಲವನ್ನು ಒಪ್ಪಿಕೊಳ್ಳುವುದೆ ಆಗಿದೆ. ಪ್ರತಿಭಟಿಸುವ, ಪ್ರಶ್ನಿಸುವ ತುಡಿತಗಳಿಲ್ಲದ ಸಹನೆಗೆ ಅರ್ಥವಿಲ್ಲ. ಅದು ಜಾಣ್ಮೆಯ ಸಂಕೇತವಲ್ಲ, "ಶ್ರೀಮತಿ ಮೀರಾನಾಯಕ್ ಅವರು ಚಿಕ್ಕವರಿದ್ದಾಗಲೇ ನೋಡಿದಾಗ ತಾಯಿಯಂತೆ ಕಾಣುತ್ತಿದ್ದರು. ಅವರು 'ಸಮತಾ' ಕಟ್ಟಿ ಹಾಕಿ ಸ್ತ್ರೀವಾದಿಯಾದಾಗ ಚಿಕ್ಕವರಿದ್ದಾಗಲೂ ಕಾಣುತ್ತಿದ್ದ ತಾಯಿಯಂಥ ರೀತಿ ಅವರು ದೊಡ್ಡವರಾದ ಮೇಲೆ ಮತ್ತಷ್ಟು ಹೆಚ್ಚಾಗಬೇಕಿತ್ತು. "ಹೀಗಾಗಲಿಲ್ಲ, ಹಾಗಾಗಬಾರದು". ದೇವನೂರುರವರ ಈ ಅಭಿಪ್ರಾಯ ಮಹಿಳಾ ಸಂಘಟನೆಗಳು ಎತ್ತಿ ಹಿಡಿಯುವ ಮೌಲ್ಯಗಳ ಕುರಿತಾಗಿದೆ.

ಈ ತಾಯ್ತನದ ಮೌಲ್ಯಗಳು ಕೇವಲ ಸ್ತ್ರೀಯರಿಗೆ ಸೀಮಿತವಾಗಿದೆಯೆ? ಇವು ಹುಟ್ಟಿನಿಂದ ಬಂದ ಜೈವಿಕ ಲಕ್ಷಣಗಳೆ? ಖಂಡಿತಾ ಅಲ್ಲ. ಈ ಮೌಲ್ಯಗಳನ್ನು ಕೇವಲ ಸ್ತ್ರೀಯರಿಗೆ ಮಾತ್ರ ಆರೋಪಿಸಬೇಕಾಗಿಲ್ಲ. ಈ ಮೌಲ್ಯಗಳು ಮಾನವೀಯತೆಯ ಪ್ರಾತಿನಿಧಿಕ ಮೌಲ್ಯಗಳಾಗಿ ಸದಾ ಜೀವಂತವಾಗಿರಬೇಕಾದರೆ ಗಂಡು ಹಾಗೂ ಹೆಣ್ಣು ಇಬ್ಬರಲ್ಲೂ ಇರಬೇಕಾಗುತ್ತದೆ. ಎಳೆಯ ಮಕ್ಕಳನ್ನು ಲಾಲಿಸುವ, ಪೋಷಿಸುವ ಕೆಲದಿಂದ ಪ್ರಾರಂಭವಾಗುವ ಈ ತಾಯ್ತನದ ಕೆಲಸಗಳನ್ನು ಪುರುಷ ಒಂಬತ್ತು ತಿಂಗಳು ಹೊತ್ತು ಹೆರದಿದ್ದರೂ ಖಂಡಿತಾ 'ತಾಯಿ'ಯಾಗಿ ಮಾಡಲು ಸಾಧ್ಯವಿದೆ. "It is beyond gender". ಪುರುಷ ಪ್ರಧಾನ ಸಮಾಜ ತಾಯ್ತನವನ್ನು ಸ್ತ್ರೀಯರ ಮೇಲೆ ಹೇರಿದಂತೆ ಪುರುಷನನ್ನು 'ತಾಯಿ'ಯಾಗದಂತೆ ತಡೆಯುತ್ತದೆ. ಪುರುಷ ಸಹ ತಾಯ್ತನದ ಮೌಲ್ಯಗಳನ್ನು ತನ್ನಲ್ಲಿ ರೂಪಿಸಿಕೊಳ್ಳಲು ಸಾಧ್ಯಗೊಳಿಸುವ ಸಮಾನ ಸಂಸ್ಕೃತಿಯ ವಾತಾವರಣ ನಿರ್ಮಾಣವಾಗ ಬೇಕಾಗಿದೆಯಷ್ಟೆ.

ಸ್ತ್ರೀವಾದಿ ಚಳುವಳಿಯ ಉದ್ದೇಶ ಪುರುಷ ದ್ವೇಷವಲ್ಲ. ಸ್ತ್ರೀಪರ ಚಳುವಳಿ ವಿರೋಧಿಸುತ್ತಾ ಬಂದಿರುವುದು ಪುರುಷ ಪ್ರಧಾನತೆಯನ್ನು ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಒಂದು ಸಮಾನ ಸಂಸ್ಕೃತಿಯ ವಾತಾವರಣ ನಿರ್ಮಾಣದ ಪ್ರಯತ್ನವನ್ನು ಮಹಿಳಾ ಸಂಘಟನೆಗಳು ಮಾಡುತ್ತಿವೆ. ತಾಯ್ತನದ ವೈಭವೀಕರಣವನ್ನು ಮಹಿಳಾ ಚಳುವಳಿ ಸಂಘಟನೆಗಳು ಖಂಡಿತಾ ವಿರೋಧಿಸುತ್ತವೆ. ಸ್ತ್ರೀಯ ದುಡಿಮೆಗೆ ಸಾಮರ್ಥ್ಯಕ್ಕೆ, ಸ್ವಂತಿಕೆಯನ್ನು ಗುರುತಿಸಿ ಮನ್ನಣೆಗೆ ಒತ್ತಾಯಿಸುತ್ತದೆ.

ಈ ತಾಯ್ತನದ ನಿರೀಕ್ಷೆಯನ್ನು ಕುಟುಂಬದ ವ್ಯಾಪ್ತಿಯಿಂದ ವಿಸ್ತರಿಸಲಾಗುತ್ತಿದೆ. ವಿನಾಶದ ಪ್ರಪಾತದ ಅಂಚಿನಲ್ಲಿರುವ ಪುರುಷರನ್ನು ರಕ್ಷಿಸುವ, ಭ್ರಷ್ಟ ಸಮಾಜವನ್ನು ಶುಚಿಗೊಳಿಸುವ, ಕುಟುಂಬವನ್ನು ಪೊರೆಯುವ ಹಾಗೆ ಸಮಾಜವನ್ನು ರಕ್ಷಿಸುವ ಹೊರೆಯನ್ನು ಸಹ ಅವಳ ಮೇಲೆ ಹಾಕುವ ಪ್ರಯತ್ನವನ್ನು ಸಹ ನೋಡಬಹುದು. ಪ್ರಗತಿಪರ ಸಂಘಟನೆಗಳಲ್ಲಿ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಕೆಲಸ ಮಾಡುವ ಕಾರ್ಯಕರ್ತೆಯರಿಂದಲೂ ಸಹ ಇದನ್ನು ನಿರೀಕ್ಷೆ ಮಾಡಲಾಗುತ್ತಿದೆ.

ಯಾವುದೇ ಸಂಘಟನೆ, ಚಳುವಳಿ ಯಶಸ್ವಿಯಾಗುವುದು ಜನಸಂಖ್ಯೆಯ ಅರ್ಧದಷ್ಟಿರುವ ಹೆಣ್ಣು ಮಕ್ಕಳನ್ನು ಜೊತೆಗೂಡಿಸಿಕೊಂಡು ಮುನ್ನಡೆದಾಗ ಮಾತ್ರ. ಇಲ್ಲಿ ಸಹನೆ ಬೇಕಾಗಿರುವುದು ಪುರುಷರಿಗೆ. ತಾಳ್ಮೆಯಿಂದ ನೂರು ಹೆಜ್ಜೆ ಹಿಂದೆ ಹಾಕಿ ಹೆಂಗಸರು ಒಂದು ಹೆಜ್ಜೆ ಮುಂದೆ ಹಾಕಲು ಬಿಡಬೇಕು. ಹೆಣ್ಣು ಮಕ್ಕಳ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಸಂಘಟನೆಗಳು ಅವಕಾಶವನ್ನು ಕಲ್ಪಿಸಿಕೊಡಬೇಕು. ಸಂಘಟನೆಗಳಲ್ಲಿ ಹೆಣ್ಣು ಮಕ್ಕಳು ಸಕ್ರೀಯವಾಗಿ ಭಾಗವಹಿಸಬೇಕಾದರೆ ಮನೆ ಮಕ್ಕಳ ಜವಾಬ್ದಾರಿಯನ್ನು ಪುರುಷರು ಹಂಚಿಕೊಳ್ಳಬೇಕು.

ತಾಯ್ತನದ ಮೌಲ್ಯಗಳ ಪರಿಕಲ್ಪನೆಯ 'ಮಿತಿ'ಯು ದೇವನೂರರ ಗ್ರಹಿಕೆಯಲ್ಲಿದೆಯೇ ಹೊರತು ಮೀರನಾಯಕರಲ್ಲಿ ಸಮತಾ ಸಂಘಟನೆ ಅಥವಾ ಯಾವುದೇ ಮಹಿಳಾ ಸಂಘಟನೆಯಲ್ಲಿ ಅಲ್ಲ.

●

ಮಾನಸ ತಿಂಗಳ ಪತ್ರಿಕೆಯನ್ನು ಓದುಗರ ಸಹಕಾರದಿಂದ ಪ್ರಕಟಿಸುತ್ತಿದ್ದೇವೆ. ಯಾವುದೇ ಸಂಸ್ಥೆಯ ಹಾಗೂ ಸರ್ಕಾರದ ನೆರವಿಲ್ಲದೆ, ಸ್ವಾಯತ್ತವಾಗಿ ಮಹಿಳೆಯರೇ ಪತ್ರಿಕೆಯನ್ನು ಪ್ರಕಟಿಸುತ್ತಿದ್ದೇವೆ. ಸಹೃದಯರು ವರ್ಷಕ್ಕೆ 100 ರೂ.ಗಳನ್ನು ಕೊಡುಗೆಯಾಗಿ ನೀಡುವುದರ ಮೂಲಕ ಪತ್ರಿಕೆಯ ಪ್ರಕಟಣೆಗೆ, ಮಾನಸದ ಚಟುವಟಿಕೆಗಳಿಗೆ ನೆರವಾಗಬೇಕೆಂದು ಕೋರುತ್ತೇವೆ.

- ಸಂ. ಮ.

ಭಾರತದಲ್ಲಿ ಮಹಿಳಾ ಪೋಲೀಸರು

ಭಾರತಕ್ಕೆ ಒಂದೂವರೆ ದಶಕಗಳ ಹಿಂದೆ ಮೊಟ್ಟ ಮೊದಲಿಗೆ ದೊರಕಿದ ಐಪಿಎಸ್ ಅಧಿಕಾರಿಯೆಂದರೆ ಕಿರಣ್‌ಬೇಡಿ. ಇವರು ಈ ಹುದ್ದೆಗೆ ನೇಮಕಗೊಂಡಾಗ ಹಲವರು ಮೂಗಿನ ಮೇಲೆ ಬೆರಳಿಟ್ಟರು. ಅನೇಕರು ಹುಬ್ಬೇರಿಸಿದರು. ಅವರ ಮುಂದಿದ್ದ ಪ್ರಶ್ನೆ/ಅನುಮಾನವೆಂದರೆ, ಮಹಿಳೆ ಪೋಲೀಸ್. ಅಧಿಕಾರಿಯ ಪಾತ್ರಕ್ಕೆ ಸರಿಹೊಂದುತ್ತಾಳೆಯೆ ಎನ್ನುವುದು. ಇಂದು ಹಲವು ಮಹಿಳೆಯರು ಪೋಲೀಸ್ ಸೇವೆಗೆ ನೇಮಕಗೊಂಡಿದ್ದಾರೆ. ಆದರೂ ಅವರಿನ್ನೂ ಇಲಾಖೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳಬೇಕಾಗಿದೆ. ಅಲ್ಪ ಸಂಖ್ಯಾತರಾಗಿರುವ ಇವರು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಬೇಕಾಗಿದೆ. ಈ ಸಂದರ್ಭದಲ್ಲಿ ನಮಗಿರುವ ಕೆಲವು ಪ್ರಶ್ನೆಗಳನ್ನು ಶ್ರೀಮತಿ ಬೇಡಿಯವರು ಮತ್ತೊಬ್ಬ ಗಣ್ಯ ಪೋಲೀಸ್ ಅಧಿಕಾರಿಯಾದ ಸುನೀಲ್ ಸಕ್ಸೇನಾರವರನ್ನು ಸಂದರ್ಶಿಸಿದಾಗ ಕೇಳಿದ್ದಾರೆ.

ಪ್ರ : *ಪೋಲೀಸ್ ಇಲಾಖೆಯಲ್ಲಿ ಮಹಿಳೆಯರ ಅಸ್ತಿತ್ವ ಕಂಡುಬರುತ್ತಿದೆಯೆ?*

ಉ : ಮೊದಲ ಕಾರಣವೆಂದರೆ ಮಹಿಳೆಯರು ಪೋಲೀಸ್ ಪಡೆಯಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ನಿರ್ಧಾರ ತೆಗೆದುಕೊಳ್ಳುವಂಥ ಹುದ್ದೆಗಳಲ್ಲಿಲ್ಲ. ಸವಾಲುಗಳೇ ಎದುರಾಗದ ಹುದ್ದೆಗಳನ್ನು ಅವರಿಗೆ ನೀಡಲಾಗುತ್ತದೆ.

ಪ್ರ : *ನಿರ್ಧಾರ ತೆಗೆದುಕೊಳ್ಳುವ ಮಟ್ಟದ ಹುದ್ದೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅವರಿದ್ದರೆ ಬದಲಾವಣೆ ಆಗುತ್ತದೆಂದು ಭಾವಿಸುತ್ತೀರಾ?*

ಉ : ಖಂಡಿತ, ಒಂದೇ ದಿನದಲ್ಲಿ ವ್ಯತ್ಯಾಸವನ್ನು ಕಾಣಬಹುದು.

ಪ್ರ : *ಸವಾಲುಗಳೇ ಇರದ ಮಾಡುತ್ತಿರುವ ಕೆಲಸಗಳಾವುವು?*

ಉ : ಉದಾಹರಣೆಗೆ, ಮಹಿಳೆಯೊಬ್ಬಳನ್ನು ಹುಡುಕುವ ಕೆಲಸ. ದೆಹಲಿಯಲ್ಲಿ ಮಹಿಳಾ ಪೋಲೀಸರಲ್ಲಿ ಹೆಚ್ಚಿನವರನ್ನು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರನ್ನು ತಪಾಸಣೆ ಮಾಡುವುದು ಮುಂತಾದ ಕರ್ತವ್ಯಗಳಿಗೆ ನೇಮಿಸಲಾಗಿದೆ. ಇದೊಂದು ಸವಾಲಾಗುವ ಕೆಲಸವಲ್ಲ, ಇಂಥ ಕೆಲಸಗಳಲ್ಲಿ ಅವರು ತಮ್ಮನ್ನೇ ಕಳೆದುಕೊಂಡ ಭಾವನೆ ಹೊಂದುತ್ತಾರೆ. ಕೆಲವು ಕೆಲಸಗಳಲ್ಲಿ ಉಟ್‌ಬೈಟ್ ಮಾತ್ರ ಮಾಡುತ್ತಿರುತ್ತಾರೆ.

ಪ್ರ : *ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಾಯಿಸುವಂತೆ ಕೋರಿಕೆಗಳು ಬಂದಿವೆಯೆ?*

ಉ : ಹೌದು, ಅಂಥ ಬೇಡಿಕೆಗಳು ಬೇಕಾದಷ್ಟಿವೆ.

ಪ್ರ : *ಮಹಿಳಾ ಪೋಲೀಸರ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಗಳೇನೂ ನಡೆದಿಲ್ಲವೇಕೆ?*

ಉ : ನೀವು 50 ಮಂದಿ ಪುರುಷ ಪೋಲೀಸ್ ಸಬ್‌ಇನ್‌ಸ್ಪೆಕ್ಟರುಗಳನ್ನು ಬಿಟ್ಟುಕೊಟ್ಟರೆ ನಿಮಗೆ 50 ಮಂದಿ ಮಹಿಳಾ ಸಬ್‌ಇಸ್ಪೆಕ್ಟರುಗಳನ್ನು ಕೊಡುತ್ತೇವೆ ಎನ್ನುವ ಕಾಲವೊಂದಿತ್ತು. ಅದಕ್ಕೆ ನಾವು ಪುರುಷ ಸಬ್‌ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ನಮ್ಮ ಉತ್ತರವಾಗಿತ್ತು. ಆದರೆ ಒಂದು ಉದ್ದೇಶಕ್ಕಾಗಿ ನಮಗೆ ಮಹಿಳಾ ಸಬ್‌ಇನ್‌ಸ್ಪೆಕ್ಟರುಗಳ ತುರ್ತು ಅಗತ್ಯವಿದೆ.

ಪ್ರ : *ಆ ಉದ್ದೇಶವೇನು?*

ಉ : ಸಮುದಾಯದ ಅಗತ್ಯಗಳಿಗೆ ಗಮನಹರಿಸಲಾಗದ ಪರಿಸ್ಥಿತಿ ಮಹಿಳಾ ಪೋಲೀಸರ ಕೊರತೆಯಿಂದುಂಟಾಗಿತ್ತು. ದೇಶದ ಜನಸಂಖ್ಯೆಯ ಅರ್ಧದಷ್ಟು ಮಂದಿ ಮಹಿಳೆಯರಿದ್ದಾರೆನ್ನುವುದನ್ನು ನಾವು ಮರೆಯಬಾರದು.

ಪ್ರ : *ಪೋಲೀಸು ಠಾಣೆಗೆ ಬರದಿರುವ ಫಿರ್ಯಾದುದಾರರು (Complainants) ಯಾರು? ಮಹಿಳೆಯರು ಮಾತ್ರವೆ ಅಥವಾ ಪುರುಷರೂ ಆಗಿರುತ್ತಾರೆಯೆ?*

ಉ : ಪುರುಷರೂ ಇರುತ್ತಾರೆ. ಕೌಟುಂಬಿಕ ಸಮಸ್ಯೆಗಳಂಥ ಕೆಲವು ನಿರ್ದಿಷ್ಟ ಸಮಸ್ಯೆಗಳಿರುತ್ತವೆ. ಅವುಗಳನ್ನು ಮಹಿಳೆಯೊಬ್ಬಳು ಅಥವಾ ಪುರುಷನೊಬ್ಬ ಬಗೆಹರಿಸಬೇಕೆಂದು ಪ್ರತ್ಯೇಕಿಸಿ ಹೇಳಲಾಗುವುದಿಲ್ಲ. ಕೆಲವು ಸಮಸ್ಯೆಗಳನ್ನು ಗುಂಪು-ವಿಧಾನದಿಂದ ಬಗೆಹರಿಸುವ ಅಗತ್ಯವಿರುತ್ತದೆ. ಮಹಿಳಾ ಅಧಿಕಾರಿ ಪುರುಷನನ್ನು ಚೆನ್ನಾಗಿ ನಿಭಾಯಿಸಬಲ್ಲಳು. ಹಾಗೇ ಪುರುಷ ಅಧಿಕಾರಿ ಕೂಡ ಮಹಿಳೆಯನ್ನು ನಿಭಾಯಿಸಬಲ್ಲ.

ಪ್ರ : *ಮಹಿಳೆಯರನ್ನು ಪೋಲೀಸ್ ಪಡೆಯ ಯಾವ ಮಟ್ಟದಲ್ಲಿ ನೇಮಿಸಬೇಕೆಂದು ಹೇಳುತ್ತೀರಿ?*

ಉ : ಎಲ್ಲಾ ಮಟ್ಟದಲ್ಲೂ ಕಾನ್‌ಸ್ಟೇಬಲ್ಲುಗಳು, ಸಬ್‌ಇನ್‌ಸ್ಪೆಕ್ಟರುಗಳು, ಅಧಿಕಾರಿಗಳು ಮಹಿಳೆಯರಾಗಿರುವ ಅಗತ್ಯವಿದೆ. ಕೆಲವು ವರ್ಷಗಳ ಹಿಂದೆ ದೆಹಲಿ ಪೋಲೀಸಿನಲ್ಲಿ ಮಹಿಳೆಯರನ್ನು ಕಾನ್‌ಸ್ಟೇಬಲ್‌ಗಳಾಗಿ ನೇಮಕ ಮಾಡುತ್ತಿರಲೇ ಇಲ್ಲ. ಸಬ್‌ಇನ್‌ಸ್ಪೆಕ್ಟರುಗಳೇ ಕಾನ್‌ಸ್ಟೇಬಲ್‌ಗಳು ಮಾಡಬೇಕಾದ ಕೆಲಸಗಳನ್ನು ಅಂದರೆ ಮಹಿಳಾ ಬಂಧಿಗಳಿಗೆ ರಕ್ಷಣೆ ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು. ತಮಗೆ ಇಷ್ಟವಾಗದ ಕೆಲಸಗಳನ್ನು ಮಾಡಿಸಿಕೊಂಡು ಅವರನ್ನು ಕೆಳಕ್ಕಿಳಿಸುತ್ತಿದ್ದೆವು.

ಪ್ರ : *ಇಂದು ದೆಹಲಿ ಪೋಲೀಸಿನಲ್ಲಿ ಮಹಿಳೆಯರ ಸಂಖ್ಯೆ ಸಾಕಷ್ಟಿದೆಯೆ?*

ಉ : ಇಲ್ಲ, ಸಾಕಷ್ಟಿಲ್ಲ. ಪೋಲೀಸ್ ಪಡೆಯಲ್ಲಿ ಹೆಚ್ಚಿನವರು ಎರಡೆರಡು ಕೆಲಸಗಳಿಗೆ ನೇಮಕಗೊಂಡಿದ್ದಾರೆ - ಒಂದೆಂದರೆ, ವಿಮಾನ ನಿಲ್ದಾಣದ ರಕ್ಷಣೆ, ಇನ್ನೊಂದು, ಅತಿಗಣ್ಯರ ರಕ್ಷಣೆ. ಇದರಿಂದ ಬೀದಿ ಬದಿಯಲ್ಲಿ ಮಹಿಳೆಯರಿಗಾಗಿ ಕೆಲಸ ಮಾಡುವ ಮಹಿಳಾ ಪೋಲೀಸರು ಇಲ್ಲವೇ ಇಲ್ಲ ಎನ್ನಬಹುದು.

ಪ್ರ : *ಹಾಗಾದರೆ ಸಿಬ್ಬಂದಿ ಎಷ್ಟಿರಬೇಕು?*

ಉ : ಮೆಟ್ರೋಪಾಲಿಟನ್ ನಗರಗಳ ಪ್ರತಿಯೊಂದು ಪೋಲೀಸು ಠಾಣೆಯಲ್ಲಿ ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ಕುಳಿತುಕೊಳ್ಳಲು ಪುರುಷ ಅಧಿಕಾರಿಯೊಂದಿಗೆ ಕನಿಷ್ಠ ಒಬ್ಬ ಮಹಿಳಾ ಅಧಿಕಾರಿಯಾದರೂ ಇರಬೇಕು. ಅವರು ಸಬ್‌ಇನ್‌ಸ್ಪೆಕ್ಟರ್ ಅಲ್ಲದಿದ್ದರೆ ಸಹಾಯಕ ಸಬ್‌ಇನ್‌ಸ್ಪೆಕ್ಟರಾದರೂ ಆಗಿರಬೇಕು. ಪ್ರತಿಯೊಂದು ಠಾಣೆಯಲ್ಲೂ ಒಬ್ಬ ಮಹಿಳಾ ಸಬ್‌ಇನ್‌ಸ್ಪೆಕ್ಟರ್ ತನಿಖಾಧಿಕಾರಿಯಾಗಿರಬೇಕು.

ಪ್ರ : *ಪೋಲೀಸು ಠಾಣೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಇರಬೇಕೆಂದು ಏಕೆ ಹೇಳುತ್ತೀರಿ?*

ಉ : ಠಾಣೆಗೆ ಬರುವ ಸಮಸ್ಯೆಗಳಲ್ಲಿ ಶೇ. 50ರಷ್ಟು ಸಮಸ್ಯೆಗಳು ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳಾಗಿರುತ್ತವೆ. ಅವುಗಳಲ್ಲಿ ಕೆಲವು ಕಾನೂನು ಪುಸ್ತಕಗಳಲ್ಲಿ ಅಪರಾಧವಲ್ಲ ಎಂದಿರಬಹುದು. ಆದರೆ ಅವು ಕಾಲಕ್ರಮೇಣ ಅಪಾಯಕಾರಿಯಾಗಬಹುದು. ಅಂಥ ಪರಿಸ್ಥಿತಿಗಳನ್ನು ತಣ್ಣಗಾಗಿಸುವಲ್ಲಿ ಮಹಿಳಾ ಅಧಿಕಾರಿ ಇದ್ದರೆ ಹೆಚ್ಚು ಸಹಾಯಕ.

ಪ್ರ : *ಭಾರತೀಯ ಮಹಿಳಾ ಪೋಲೀಸರು ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳಾವುವು?*

ಉ : ಮುಖ್ಯವಾದುದೆಂದರೆ, ಪಡೆಯ ಒಳಗೆ ಮತ್ತು ಹೊರಗೆ ಇರುವ ಅತ್ಯಂತ ಹೆಚ್ಚಿನ ದ್ವಂದ್ವ ನೀತಿ (bias). ತಮ್ಮ ಸಹೋದ್ಯೋಗಿಗಳಿಂದಲೇ ಕಿರುಕುಳಕ್ಕೊಳಗಾದ ಮಹಿಳೆಯರನ್ನು ಕಂಡಿದ್ದೇನೆ. ಇವರಲ್ಲಿ ಹೆಚ್ಚಿನವರು ಅವಿವಾಹಿತರಾಗಿರುತ್ತಾರೆ. ಎರಡನೆಯದೆಂದರೆ, ಒಬ್ಬ ಪುರುಷ ಕಾನ್‌ಸ್ಟೇಬಲ್ಲಿನಂತೆ ಮಹಿಳಾ ಕಾನ್‌ಸ್ಟೇಬಲ್‌ಗಳಿಂದ ಒರಟು ನಡವಳಿಕೆಯನ್ನು ಸಾರ್ವಜನಿಕರು ನಿರೀಕ್ಷಿಸುವುದಿಲ್ಲ. ಅಲ್ಲದೆ, ಅವರು ಎಲ್ಲರಿಂದ ಕಡೆಗಣಿಸುವಿಕೆಯ ಭಾವನೆ ಹೊಂದಿರುತ್ತಾರೆ. ಅನಿವಾರ್ಯವಾಗಿ ಪುರುಷ ಅಧಿಕಾರಿ ಯಾವುದೇ ಸಂಕೀರ್ಣ ಭಾವನೆಯಿಂದಲೇ ಆರಂಭಿಸುತ್ತಾನೆ. ಒಬ್ಬ ಮಹಿಳಾ ಕಾನ್‌ಸ್ಟೇಬಲ್ ಇದ್ದಳೆಂದರೆ ಅವಳನ್ನು ಮೀಸಲು ಇಟ್ಟುಕೊಳ್ಳಲಾಗುತ್ತದೆ. ಉದಾಹರಣೆಗೆ, ಒಂದು ಠಾಣೆಯಲ್ಲಿ ಇಬ್ಬರು ಮಹಿಳೆಯರು, 80 ಮಂದಿ ಪುರುಷರಿದ್ದರೆ, ಕಾವಲು ಪೋಲೀಸರನ್ನು ಆಯ್ಕೆ ಮಾಡುವಾಗ ಮಹಿಳೆಯರನ್ನು ಬಿಟ್ಟುಬಿಡಲಾಗುತ್ತದೆ. ಅವರನ್ನು ಕಛೇರಿ ಕೆಲಸಕ್ಕೆ ಹಾಕಲಾಗುತ್ತದೆ. ಅವರು ಅಸಹಾಯಕತೆಯಿಂದ ಇರುವುದಕ್ಕೇ ಹೊಂದಿಕೊಳ್ಳುತ್ತಾ ಹೋಗುತ್ತಾರೆ.

- *ವೆ. ವನಜ* (ಆಧಾರ).

ಮುಂದುವರಿದ ಚರ್ಚೆ - ಮಹಿಳಾ ಮೀಸಲಾತಿ

ಗೀತಾ ಮುಖರ್ಜಿ

ಗೀತಾ ಮುಖರ್ಜಿ ಸಿ.ಪಿ.ಐ. ಪಕ್ಷದ ಅನುಭವಸ್ಥ ನಾಯಕಿ. ಐದು ಬಾರಿ ಸತತವಾಗಿ ಲೋಕಸಭೆಗೆ ಆಯ್ಕೆಯಾದ ಗೀತಾ ಪಶ್ಚಿಮ ಬಂಗಾಳದವರು. ಮಹಿಳಾ ಮೀಸಲಾತಿಯ ಪರವಾಗಿ ಒಮ್ಮತ ಅಭಿಪ್ರಾಯವನ್ನು ರೂಪಿಸಲು ಪ್ರಯತ್ನಿಸಿದ ಮಹಿಳೆಯರಲ್ಲಿ ಇವರು ಪ್ರಮುಖರು. ಮೀಸಲಾತಿಯ ಬಗ್ಗೆ ಅವರು ಮಂಡಿಸಿದ ಅಭಿಪ್ರಾಯಗಳಿವು

ಸಂಯುಕ್ತ ರಂಗದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಮಹಿಳಾ ಮೀಸಲಾತಿಯನ್ನು ಸಹ ಸೇರಿಸಲಾಗಿತ್ತು. ಆದರೆ ಇದನ್ನು ಸಂಸತ್ತಿನಲ್ಲಿ ಮಂಡಿಸುವವರೆಗೆ ಇದರ ಪರಿಣಾಮದ ಬಗ್ಗೆ ಸಂಯುಕ್ತ ರಂಗಕ್ಕೆ ಅರಿವಿರಲಿಲ್ಲ. ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವಲ್ಲಿ ಹಿಂದುಳಿದ ವರ್ಗದವರ ಬೇಡಿಕೆಯು ಒಂದು ಅಡ್ಡಿಯಾಗಿದೆ. ಹಿಂದುಳಿದ ವರ್ಗದ ಮಹಿಳೆಯರ ಮೀಸಲಾತಿಯ ಬೇಡಿಕೆಗೆ ಸಂವಿಧಾನಾತ್ಮಕ ಬದಲಾವಣೆಗಳು ಆಗಬೇಕಾಗಿದೆ. ಅದು ಜಾರಿಗೆ ಬರುವ ಸಮಯದಲ್ಲಿ ಬರಲಿ, ಮಹಿಳಾ ಮೀಸಲಾತಿಯ ಮಸೂದೆ ಹಿಂದುಳಿದ ವರ್ಗದ ಮಹಿಳೆಯರ ಬೇಡಿಕೆಗೆ ಅಡ್ಡಿಯಾಗಲಾರದು. ಹಿಂದುಳಿದ ವರ್ಗದವರು ಬಹುಸಂಖ್ಯಾತರಿರುವಲ್ಲಿ ಸಹಜವಾಗಿ ಆಯ್ಕೆಯಾಗುವ ಸ್ತ್ರೀಯರು ಈ ವರ್ಗಗಳಿಂದ ಬಂದವರಾಗಿರುತ್ತಾರೆ. ಹಿಂದುಳಿದ ವರ್ಗದವರು ತಮ್ಮ ಮಹಿಳೆಯರ ಬಗ್ಗೆ ಹೆಚ್ಚಿನ ಕಾಳಜಿಯುಳ್ಳವರಾದರೆ, ತಮ್ಮ ಪಕ್ಷದಲ್ಲೇ ಅವರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕು. ಆದರೆ ಗ್ರಾಮ ಪಂಚಾಯಿತಿ ಮೀಸಲಾತಿಯ ಸಂದರ್ಭದಲ್ಲಿ ಇಂತಹ ಬೇಡಿಕೆಗಳು ಬರದಿರುವುದು ಆಶ್ಚರ್ಯ. ಲೋಕಸಭೆಯ ಪುರುಷ ಸದಸ್ಯರು ತಮ್ಮ ಸೀಟುಗಳನ್ನು ಭದ್ರಪಡಿಸಿಕೊಳ್ಳುವ ಉದ್ದೇಶದಿಂದ ಇಂತಹ ಬೇಡಿಕೆಗಳನ್ನು ಇಡುತ್ತಿದ್ದಾರೆ.

ನನ್ನ ಪಕ್ಷವನ್ನು ಸಹ ಒಳಗೊಂಡು ಮೀಸಲಾತಿಯ ಮಸೂದೆಯ ಬಗ್ಗೆ ಒಳಗೊಳಗೆ ಪ್ರತಿರೋಧವಿದೆ. ನಮ್ಮ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಮಂಡಳಿಯಲ್ಲಿ ಮಹಿಳಾ ಸದಸ್ಯರು ಇಲ್ಲ. ನಾನು ಸದಸ್ಯಳಾಗಬೇಕೆಂದು ಪಕ್ಷ ಹಲವಾರು ಬಾರಿ ಕೇಳಿದೆ. ಇತರ ಕೆಲಸದ ಒತ್ತಾಯದ ಕಾರಣ ನಾನು ಸದಸ್ಯಳಾಗ ಬಯಸಲಿಲ್ಲ. ಆದರೆ ಬೇರೆ ಮಹಿಳೆಯರು ಸದಸ್ಯರಾಗುವ ಸಾಧ್ಯತೆಗಳಿದ್ದವು. ಒಟ್ಟಾಗಿ ಸ್ತ್ರೀಯರ ಬಗ್ಗೆ ಸೂಕ್ಷ್ಮ ಸಂವೇದನೆಯ ಒಂದು ಪ್ರಕ್ರಿಯೆ ಪ್ರಾರಂಭವಾಗಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮೀಸಲಾತಿಗೆ ಖಂಡಿತಾ ಬಹುಮತ ಸಿಗುತ್ತದೆ. ಮೀಸಲಾತಿ ಮಸೂದೆಗೆ ಪುರುಷ ಮತದಾರರು ಸಹ ಬೆಂಬಲ ನೀಡುತ್ತಾರೆ. ಪಂಚಾಯಿತಿ ಸದಸ್ಯರಾಗಿರುವ ಸ್ತ್ರೀಯರು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಹಿಳೆಯರ ನಾಯಕತ್ವದ ಬಗ್ಗೆ ಪುರುಷರು ಸದಭಿಪ್ರಾಯವನ್ನು ಹೊಂದಿದ್ದಾರೆ. ಮಹಿಳಾ ಮತದಾರರು ಸಹ ಮೀಸಲಾತಿಯನ್ನು ಬೆಂಬಲಿಸುತ್ತಾರೆ.

ಎಡಪಂಥೀಯ ಪಕ್ಷಕ್ಕಿಂತ, ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚು ಮಹಿಳಾ ನಾಯಕಿಯರು ಕಂಡುಬರುತ್ತಿರುವುದು ನಿಜ. ಆದರೆ ಎಡಪಂಥೀಯ ಪಕ್ಷಗಳು ಈ ಮಸೂದೆಯನ್ನು ಬೆಂಬಲಿಸುತ್ತಿವೆ. ಚುನಾವಣೆಗಳು ಇಷ್ಟು ಅವಸರದಲ್ಲಿ ನಡೆಯದಿದ್ದರೆ ನಮ್ಮ ಪಕ್ಷವೂ ಸಹ ಹೆಚ್ಚು ಜನ ಮಹಿಳೆಯರನ್ನು ಚುನಾವಣಾ ಕಣಕ್ಕೆ ಇಳಿಸುತ್ತಿದ್ದೆವು. ಈಗಲೂ ಸಹ ಪ್ರಯತ್ನಿಸುತ್ತಿದ್ದೇವೆ. ಮಹಿಳೆಯರನ್ನು ಚುನಾವಣೆಗೆ ತೊಡಗಿಸಲು ಅಗತ್ಯವಾದ ತಯಾರಿ ನಡೆಸಬೇಕಾಗುತ್ತದೆ.

1980 ಮಧುಕೀಶ್ವರ್‌ರವರು ಮಾನುಷಿಯಲ್ಲಿ "ಸುಶೀಲಾ ಗೋಪಾಲನ್ ಹೊರತಾಗಿ ಉಳಿದ ಮಹಿಳಾ ಲೋಕಸಭಾ ಸದಸ್ಯರು ಅವರ ಗಂಡಂದಿರ ಕೃಪಾಕಟಾಕ್ಷದಿಂದ ಆಯ್ಕೆಯಾಗಿದ್ದಾರೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಒಬ್ಬರ ಹೆಂಡತಿಯಾಗಿರುವುದರಿಂದ ಚುನಾವಣೆಗೆ ನಿಲ್ಲುವುದು ಅನರ್ಹವಾಗುತ್ತದೆಯೆ? ಒಬ್ಬರ ಹೆಂಡತಿಯಾಗಿರುವುದು ಖಂಡಿತಾ ತಪ್ಪಲ್ಲ. ಒಬ್ಬರ ಹೆಂಡತಿಯಾಗಿರುವುದು ಇಷ್ಟು

ಚರ್ಚೆಯಾಗುವುದಾದರೆ, ಮಗ ಅಳಿಯ ಸದಸ್ಯರಾಗುವುದರ ಬಗ್ಗೆ ಏಕೆ ಉಸಿರೆತ್ತುವುದಿಲ್ಲ. ಪ್ರಶ್ನೆ ಯಾರ ಹೆಂಡತಿ ಎಂಬುದಲ್ಲ. ಆಕೆ ಲೋಕಸಭೆಯಲ್ಲಿ ಕಾರ್ಯನಿರ್ವಹಿಸಬಲ್ಲಳೆ? ಎಂಬುದು. ಲೋಕಸಭೆಯ ಪುರುಷ ಸದಸ್ಯರ ಕಾರ್ಯ ವೈಕರಿಯ ಮಟ್ಟ ಸ್ತ್ರೀಯರಿಗಿಂತ ಕಡಿಮೆ ಎಂದೇ ನನ್ನ ಅಭಿಪ್ರಾಯ. ಮೀಸಲಾತಿಯಿಂದ ರಾಜಕೀಯ ವ್ಯಕ್ತಿಗಳ ಮಹಿಳಾ ಸಂಬಂಧಿಕರು ಆಯ್ಕೆಯಾಗಿ ಬರುತ್ತಾರೆ ಎಂಬ ಕಲ್ಪನೆ ಖಂಡಿತಾ ತಪ್ಪು. ಪಂಚಾಯಿತಿಯಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ನೀಡಿದಾಗ ಸಹ ಹೀಗೆ ವಿರೋಧಿಸಲಾಯಿತು. ಪ್ರಾರಂಭದಲ್ಲಿ ಇದು ಕಂಡುಬಂದರೂ ಕ್ರಮೇಣ ಬದಲಾವಣೆಯಾಗುತ್ತದೆ. ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಕೇರಳ, ಹರ್ಯಾಣದಲ್ಲಿ ಕೇವಲ ಒಂದು ವರ್ಷದಲ್ಲಿ ಸ್ತ್ರೀಯರು ತಮ್ಮನ್ನು ತಾವು ಯಶಸ್ವಿಯಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ.

ನಮ್ಮ ದೇಶದಲ್ಲಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಒಂದು ಕೋಟಿ ಹೆಂಗಸರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಇದು ಮೀಸಲಾತಿಯಿಂದ ಸಾಧ್ಯವಾಗಿದೆ. ಮೀಸಲಾತಿ ಇಲ್ಲದಿದ್ದರೆ ಮಹಿಳೆಯರು ಪಂಚಾಯಿತಿ ಕಟ್ಟೆಯನ್ನು ಹತ್ತಲು ಸಾಧ್ಯವಾಗುತ್ತಿರಲಿಲ್ಲ. ಆಯ್ಕೆಯಾಗಿರುವ ಮಹಿಳೆಯರಲ್ಲಿ ಅವಿದ್ಯಾವಂತ ಮಹಿಳೆಯರು ಇರಬಹುದು. ಹೀಗೆ ಆಯ್ಕೆಯಾದ ಬಹಳಷ್ಟು ಮಹಿಳೆಯರು ಓದು ಬರಹ ಕಲಿಯುವ ತಾನು ನಿರ್ವಹಿಸಬೇಕಾದ ಕೆಲಸದ ಬಗ್ಗೆ ಮಾಹಿತಿಯನ್ನು ಪಡೆಯುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಪಕ್ಷಗಳಲ್ಲಿ ಮೂಲಭೂತ ಬದಲಾವಣೆಯಾಗಬೇಕಿದೆ. ಸ್ತ್ರೀಯರಿಗೆ ಹೆಚ್ಚು ಪ್ರಾತಿನಿಧ್ಯವನ್ನು ನೀಡಬೇಕಾಗಿದೆ. ಮಹಿಳಾ ಮೀಸಲಾತಿ ಪಕ್ಷದೊಳಗಡೆ ಇಂತಹ ಬದಲಾವಣೆಯ ಒತ್ತಡವನ್ನು ಖಂಡಿತಾ ಹೇರುತ್ತಿದೆ. ಮಹಿಳಾ ಸಂಘಟನೆಗಳೂ ಮಸೂದೆಯನ್ನು ಜಾರಿಗೆ ತರುವಂತೆ ಇತರ ಪಕ್ಷಗಳನ್ನು ಒತ್ತಾಯಿಸುತ್ತವೆ. ಇತರ ಪಕ್ಷಗಳೂ ಸಹ ಮಹಿಳೆಯರಿಗೆ ಹೆಚ್ಚು ಅವಕಾಶ ನೀಡುವಂತೆ ಮನವಿ ಮಾಡುತ್ತಿದ್ದೇವೆ.

●

15ನೇ ಪುಟದಿಂದ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ನಮ್ಮ ದೇಹದ ಮೂಲಕ ಭಾರಿ ಲಾಭ ಮಾಡಿಕೊಳ್ಳುವ ಸರ್ಕಾರಗಳು, ನೀಚವ್ಯಕ್ತಿಗಳನ್ನು ನಾವು ವಿರೋಧಿಸುತ್ತೇವೆ. ನಮ್ಮ ದಂಧೆಯೂ ನಮ್ಮ ಸಮುದಾಯದಲ್ಲಿನ ಸಂಪ್ರದಾಯಿಕ ಸದಸ್ಯರ ನಿಯಂತ್ರಣದಿಂದ ಅಪರಾಧಿಗಳ ಆಡಳಿತಕ್ಕೆ ಬದಲಾಯಿಸಲ್ಪಟ್ಟಿದೆ. ನಾವು ಮಾರಾಟಕ್ಕಿಲ್ಲ, ಇಂದಿನ ಜಗತ್ತಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಂದ, ಕೆಲವೊಮ್ಮೆ ನಮ್ಮ ಸಮುದಾಯದೊಳಗೆಯೆ ನಮ್ಮನ್ನು ಸರಕಾಗಿಸಲಾಗುತ್ತಿದೆ, ಬಲಿಕೊಡಲಾಗುತ್ತಿದೆ. ಇದು ನಮ್ಮ ದೌರ್ಭಾಗ್ಯ.

ಜಾಗತೀಕರಣ ಮತ್ತು ಉದಾರ ಆರ್ಥಿಕ ನೀತಿಯಿಂದಾಗಿ ನಮ್ಮ ಸಮುದಾಯದಲ್ಲಿ ಹೆಚ್ಚಿನ ಒಡಕುಂಟಾಗುತ್ತಿದೆ ಮತ್ತು ನಮ್ಮ ಮೈ ಮಾರಿಕೊಳ್ಳುವುದನ್ನು ಒಪ್ಪಿಕೊಳ್ಳಲು ಪಟ್ಟಣದ ಕೈಗಾರಿಕಾ ಕೇಂದ್ರಗಳಲ್ಲಿ ವೇಶ್ಯಾವೃತ್ತಿಗೆ ನಮ್ಮ ಯುವತಿಯರನ್ನು ಮಾರಾಟ ಮಾಡಲು ಒತ್ತಾಯಿಸಲಾಗುತ್ತಿದೆ. ಬೇರೆ ಉದ್ಯೋಗಕ್ಕಾಗಿ ಪ್ರಯತ್ನಿಸುವುದು ನಮಗೆ ಹೊಸತೇನಲ್ಲ. ಸಮಸ್ಯೆಯೇನೆಂದರೆ ವೃತ್ತಿಯ ಅಪರಾಧೀಕರಣ ಜೀತಕ್ಕೆ, ಬಲಾತ್ಕಾರದ ದುಡಿಮೆ, ದಾಸ್ಯಕ್ಕೆ ನಮ್ಮನ್ನು ಬಲವಂತವಾಗಿ ತಳ್ಳುತ್ತದೆ. ಇದರ ಪರಿಣಾಮವಾಗಿ, ಕೆಲಸಕ್ಕಾಗಿ ನಮ್ಮನ್ನು ಬಳಸಿಕೊಳ್ಳುವ ಖೂಳರ ಗುಂಪಿಗೆ ಸಿಕ್ಕಿಕೊಳ್ಳುತ್ತೇವೆ.

ನಾಗರೀಕ ಸಮಾಜದ ದುಡಿಮೆಗಾರರಾಗಿ, ಪ್ರಜೆಗಳಾಗಿ ನಮ್ಮ ಘನತೆಯನ್ನು ಉಳಿಸಿಕೊಳ್ಳಲು ವೇಶ್ಯಾವೃತ್ತಿಯಲ್ಲಿನ ಮಹಿಳೆಯರಿಗಂಟಿರುವ ಕಳಂಕವನ್ನು ತೊಡೆದು ಹಾಕಲು ನಾವೆಲ್ಲ ಒಂದಾಗಬೇಕೆಂಬುದನ್ನು ನಾವು ಮನಗಂಡಿದ್ದೇವೆ. ನಾವು ಸಮಾಜದ ಇತರೆ ಭಾಗಗಳೊಂದಿಗೆ ಮೈತ್ರಿ ಬಳಸಿಕೊಳ್ಳುವ ಅಗತ್ಯವಿದೆ ಮತ್ತು ಒಟ್ಟಾಗಿ ಮಹಿಳೆಯರ ಹಕ್ಕುಗಳನ್ನು ದಮನ ಮಾಡುವ ಪಟ್ಟಭದ್ರ ಹಿತಾಸಕ್ತಿಯುಳ್ಳ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ.

ಪೂಣೆಯ ವೇಶ್ಯಾ ಏಡ್ಸ್‌ಮುಖಾಬ್ಲ ಪರಿಷದ್‌ನ ಸದಸ್ಯರು ಸಾರ್ವಜನಿಕವಾಗಿ ನೀಡಿರುವ ಹೇಳಿಕೆ.

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 75 ರೂ.

ಸಂ. ಮಂಡಳಿ

REGD NO. KRNA 271

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067